ಶ್ರೀ ವೇಂಕಟೇಶಾಯ ನಮಃ



ಹಿಂದೂ ಧರ್ಮದ ಪ್ರಥಮ ಪಾಠಗಳು

ತಿರುಮಲ ತಿರುಪತಿ ದೇವಸ್ಥಾನಗಳ
ಹಿಂದೂ ಧರ್ಮ ರಕ್ಷಣಾ ಸಂಸ್ಥೆಯವರಿಂದ
ಪ್ರಕಟಿಸಲಾಗಿದೆ

ತಿರುಪತಿ

೧೯೬೦

ತಿರುಮಲ ತಿರುಪತಿ ದೇವಸ್ಥಾನಗಳ

ಹಿಂದೂ ಧರ್ಮ ರಕ್ಷಣ ಸಂಸ್ಥೆ, ತಿರುಪತಿ.

ಸಂದೇಶ

ಹಿಂದೂ ಧರ್ಮವು ಲೋಕದ ಸಮಸ್ತ ಜನರಿಗೆ ಅತ್ಯುತ್ತಮ ಜೀವನವನ್ನು ನಡೆಸಲು ಅವಶ್ಯಕವಾದ ಪ್ರೇರಣೆ ಮತ್ತು ಮಾರ್ಗದರ್ಶನಗಳನ್ನು ನೀಡುತ್ತದೆ. ಇದರಿಂದ ಸದೃಢ ಸಮಾಜ ಮತ್ತು ಸುಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕಾದುದು ಪ್ರತಿಯೊಬ್ಬ ಹಿಂದೂವಿನ ಕರ್ತವ್ಯವಾಗಿದೆ. ಇಂತಹ ಪ್ರಯತ್ನಕ್ಕೆ ಅನುಗ್ರಹಪೂರ್ವಕವಾಗಿ 'ಹಿಂದೂ ಧರ್ಮದ ಪ್ರಥಮ ಪಾಠಗಳು' ಎಂಬ ಕಿರು ಸಂಕಲನವನ್ನು ಪ್ರಕಟಿಸಲಾಗಿದೆ. ಈ ಸಂಕಲನದಲ್ಲಿರುವ ಒಂದೊಂದು ಸ್ತೋತ್ರವನ್ನೂ ಅರ್ಥಸಹಿತ ಕಂಠಪಾಠ ಮಾಡಿ ಎಳೆಯರು ತಮ್ಮ ಜೀವನವನ್ನು ಉತ್ತಮವಾಗಿ ಮಾಡಿಕೊಳ್ಳುವುದರ ಜೊತೆಗೆ ಹಿಂದೂ ಧರ್ಮದ ಪ್ರಚಾರ ಕಾರ್ಯದಲ್ಲಿ ಮುಂದಾಳುಗಳಾಗಿ ಸಮಸ್ತ ಮಾನವರಿಗೆ ಸುಖ, ಶಾಂತಿಗಳನ್ನು ದೊರಕಿಸಲು ಪ್ರಮುಖ ಪಾತ್ರ ವಹಿಸಬೇಕಾಗಿ ಅಪೇಕ್ಷಿಸಿ ಅವರಿಗೆ ತಿರುಪತಿಯ ಶ್ರೀ ವೇಂಕಟೇಶ ದೇವರು ಪರಮ ಮಂಗಳವನ್ನುಂಟುಮಾಡಲೆಂದು ಹಾರೈಸುತ್ತೇವೆ.

ಬೆಂಗಳೂರು
ಸ್ಥಿರವಾಸರ :
ಮಾರ್ಗಶಿರ ಕೃಷ್ಣ ದ್ವಿತೀಯಾ
1897

ಶ್ರೀ ಶ್ರೀ ವಿಶ್ವೇಶತೀರ್ಥ
ಶ್ರೀಪಾದಂಗಳವರು
ಅಧ್ಯಕ್ಷರು

ಶ್ರೀ ವೇಂಕಟೇಶಾಯ ನಮಃ

ಹಿಂದೂ ಧರ್ಮದ ಪ್ರಥಮ ಪಾಠಗಳು

ದ್ವಿತೀಯ ಮುದ್ರಣ: 10,000 ಪ್ರತಿಗಳು.

ಶ್ರೀ ಪಿ.ವಿ.ಆರ್.ಕೆ. ಪ್ರಸಾದ್ I.A.S. ಕಾರ್ಯನಿರ್ವಹಣಾಧಿಕಾರಿ, ತಿರುಮಲ–ತಿರುಪತಿ ದೇವಸ್ಥಾನಗಳ ಹಿಂದೂ ಧರ್ಮರಕ್ಷಣಾ ಸಂಸ್ಥೆ, ಅವರಿಂದ ಪ್ರಕಟಿಸಲಾಗಿದೆ.

ವಿಷಯಾನುಕ್ರಮಣಿಕೆ

ಹಿಂದೂ ಧರ್ಮ ರಕ್ಷಣ ಸಂಸ್ಥೆ
ತಿರುಪತಿ ತಿರುಮಲೈ

ಆಂಧ್ರಪ್ರದೇಶ ಸರ್ಕಾರದವರಿಂದ ಶ್ರೀ ತಿರುಮಲ ತಿರುಪತಿ ದೇವಸ್ಥಾನಗಳ ಆಶ್ರಯದಲ್ಲಿ ಹಿಂದೂ ಧರ್ಮದ ಪ್ರಬೋಧ ಪ್ರಚಾರಗಳ ಸಲುವಾಗಿ ' ಹಿಂದೂ ಧರ್ಮ ರಕ್ಷಣ ಸಂಸ್ಥೆ ' ಎಂಬ ಸಂಸ್ಥೆಯು 1969 ನೇ ಸಂವತ್ಸರದಲ್ಲಿ ಸ್ಥಾಪಿಸಲ್ಪಟ್ಟಿದೆ.

೧. ಹಿಂದೂ ಧರ್ಮ ರಕ್ಷಣ ಸಂಸ್ಥೆ
ಧ್ಯೇಯೋದ್ದೇಶಗಳು

1. ಜನರಲ್ಲಿ ಹಿಂದೂ ಧರ್ಮದ ಬಗ್ಗೆ ತಿಳುವಳಿಕೆ ಮೂಡಿಸಿ ಪ್ರಚಾರಗಳನ್ನು ನಡೆಸುವುದು.
2. ಧಾರ್ಮಿಕ ಸಾಹಿತ್ಯವನ್ನು ಪ್ರಕಟಿಸುವುದು.
3. ಧಾರ್ಮಿಕ ಭಾವನೆಗಳನ್ನು, ನೈತಿಕ ಮೌಲ್ಯಗಳನ್ನು ಜನಸಾಮಾನ್ಯರಲ್ಲಿ ವಿಶೇಷವಾಗಿ ಎಳೆಯರಲ್ಲಿ ಮೂಡಿಸುವುದು.
4. ಹಿಂದೂ ಧರ್ಮದ ಮುಖ್ಯ ತತ್ವಗಳಲ್ಲಿ ಶ್ರದ್ಧಾಸಕ್ತಿಗಳನ್ನು ಉಂಟು ಮಾಡಿ ಭಾರತೀಯ ದರ್ಶನಗಳಿಗೆ ಅನುಸಾರವಾಗಿ ಜೀವನ ವಿಧಾನವನ್ನು ರೂಪಿಸುವುದು.
5. ವಿದ್ಯಾಶಾಲೆಗಳಲ್ಲಿ ನೈತಿಕ ಮತ್ತು ಧಾರ್ಮಿಕ ವಿಷಯಗಳನ್ನು ಬೋಧಿಸುವುದು.
6. ಮತಾಂತರೀಕರಣವನ್ನು ತಡೆಗಟ್ಟುವುದರ ಮೂಲಕ ಸಮಗ್ರ ಹಿಂದೂ ಸಮಾಜದಲ್ಲಿ ಐಕ್ಯತಾ ಭಾವನೆ ಬೆಳೆಯುವಂತೆ ಮಾಡುವುದು.

ವೈದ್ಯ ಮತ್ತು ವಿದ್ಯೆ ಇವೆರಡನ್ನೂ ಶರೀರ ಮತ್ತು ಹೃದಯಗಳಿಗೆ ಹೋಲಿಸಬಹುದಾಗಿದೆ. ಧರ್ಮಸಾಧನೆಗಾಗಿ ಶರೀರವು ಅಗತ್ಯವಾಗಿ ಬೇಕೇ ಬೇಕು. ಶರೀರವಿಲ್ಲದೆ ಹೃದಯವಿರಲು ಸಾಧ್ಯವಿಲ್ಲ. ಹಾಗೆಯೇ ಹೃದಯ ವಿಲ್ಲದ ಶರೀರವೂ ನಿರರ್ಥಕವೇ ಸರಿ (ಶವ ಸಮಾನವಾದುದು). ಶರೀರದ ಪೋಷಣೆ, ಪುಷ್ಟಿ ಮತ್ತು ತುಷ್ಟಿಗಳಿಗೆ ವೈದ್ಯವು ಹೇಗೆ ಅಗತ್ಯವೋ ಹೃದಯದ ವಿಕಾಸಕ್ಕೆ ವಿದ್ಯೆಯೂ ಅಷ್ಟೇ ಮುಖ್ಯ. ಉತ್ತಮ ಶರೀರವನ್ನು ಹೊಂದಲು ವೈದ್ಯ ಮತ್ತು ಹೃದಯ ಸಂಸ್ಕಾರವನ್ನು ಬೆಳೆಸುವ ವಿದ್ಯೆ ಇವುಗಳನ್ನು ವ್ಯಾಪಕ ಗೊಳಿಸುವುದೇ ಹಿಂದೂ ಧರ್ಮ ರಕ್ಷಣ ಸಂಸ್ಥೆಯ ಪ್ರಧಾನ ಕರ್ತವ್ಯವಾಗಿದೆ.

"ಹಿಂದೂಗಳು ತಮ್ಮ ಧರ್ಮವನ್ನು ಚೆನ್ನಾಗಿ ಅರಿತುಕೊಂಡು ಅದನ್ನು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತರಲು ಅಗತ್ಯವಾದ ಅಭಿಮಾನ ಮತ್ತು ವಿಶ್ವಾಸಗಳನ್ನು ಹೊಂದಿರಬೇಕು."

ಹಿಂದುಗಳಲ್ಲದವರಿಗೆ ಅಥವಾ ಹಿಂದೆ ಹಿಂದುಗಳಾಗಿದ್ದು ವಂಚನೆ ಯಿಂದಲೋ ಆಸೆ ಆಮಿಷಗಳಿಂದಲೋ ಕೀರ್ತಿ ಪ್ರತಿಷ್ಠೆಗಳಿಗಾಗಿಯೋ ಅಥವಾ ಬಲಾತ್ಕಾರದಿಂದಲೋ ಮತಾಂತರಿತರಾದವರಿಗೆ ಹಿಂದೂ ಧರ್ಮದ ಪ್ರಾಶಸ್ತ್ಯ ವನ್ನೂ ಪ್ರಯೋಜನಗಳನ್ನೂ ತಿಳಿಸಿ ಹೇಳುವುದು.

1. ಧರ್ಮದ ವಿವಿಧ ವಿಷಯಗಳಿಗೆ ತಕ್ಕಂತಹ ಪ್ರಚಾರಕರನ್ನೂ ಪಂಡಿತರನ್ನೂ ಕಂಡು ಅವರಿಗೆ ಅಗತ್ಯವಾದ ಶಿಕ್ಷಣವನ್ನು ಕೊಟ್ಟು ಪ್ರಚಾರವೇರ್ಪಡಿಸುವುದು.

2. ಭಜನೆ ಸಂಘಗಳನ್ನು ಎಲ್ಲ ಜಿಲ್ಲೆಗಳಲ್ಲಿಯೂ ಜಿಲ್ಲೆಯ ಪ್ರತಿ ಹಳ್ಳಿ ನಗರಗಳಲ್ಲಿಯೂ ಏರ್ಪಡಿಸುವುದು. ವಿದ್ಯಾರ್ಥಿಗಳು, ಸ್ತ್ರೀಯರು ಹರಿಜನ–ಗಿರಿಜನರು ಹೆಚ್ಚಿನ ಸಂಖ್ಯೆಯಲ್ಲಿ ಈ ಭಜನೆ ಸಂಘಗಳ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಅತ್ಯಗತ್ಯ.

3. ಹರಿಕಥೆ–ನಾಟಕಗಳ ಮೂಲಕ ಧರ್ಮಪ್ರಚಾರ ಮಾಡುವುದು.

4. ಭಾಗವತ, ರಾಮಾಯಣ, ವೆಂಕಟಾಚಲಮಹಾತ್ಮೆ ಮುಂತಾದ ಪುರಾಣ ಪ್ರವಚನಗಳನ್ನು ಏರ್ಪಡಿಸಿ ಪ್ರಚಾರ ಮಾಡುವುದು. ಉಪನ್ಯಾಸಗಳ ಮೂಲಕ ಪ್ರಚಾರ ಮಾಡುವುದು.

5. ಪ್ರಧಾನ ಕೇಂದ್ರದಲ್ಲಿ ಸ್ಥಾಯೀ ವ್ಯವಸ್ಥೆಯಾಗಿ ಪಂಡಿತ ಪರಿಷತ್ತನ್ನು ಏರ್ಪಡಿಸಿ ಜನಸಾಮಾನ್ಯರಲ್ಲಿ ಉಂಟಾಗುವ ಸಂಶಯವನ್ನು ಕುರಿತು ಧರ್ಮಶಾಸ್ತ್ರ ನಿರ್ಣಯಗಳನ್ನು ತಿಳಿಸುತ್ತಿರುವುದು.

6. ಹಿಂದೂ ಧರ್ಮದಲ್ಲಿ ಪ್ರಧಾನವಾದಂತಹ ಷೋಡಶ, ಸಾಂಖ್ಯಿಕ ಸಂಸ್ಕಾರಗಳನ್ನು ಆಚರಿಸುವವರನ್ನು ಹುರಿದುಂಬಿಸುವುದು.

7. ಧಾರ್ಮಿಕ ತಿಳುವಳಿಕೆಯನ್ನು ಕೊಡುವ ಕರಪತ್ರಗಳನ್ನೂ ಪತ್ರಿಕೆಗಳನ್ನೂ ಪ್ರಕಟಿಸಿ ಹಂಚುವುದು.

8. ಸಾಮೂಹಿಕ ಉಪನಯನಗಳನ್ನು, ವಿವಾಹಗಳನ್ನು ಸಕ್ರಮವಾಗಿ ಶಾಸ್ತ್ರೀಯ ಪದ್ಧತಿಯಿಂದ ಜರುಗಿಸಲು ಪ್ರೋತ್ಸಾಹಿಸುವುದು.

9. ಧಾರ್ಮಿಕ ಗ್ರಂಥಗಳನ್ನೂ ಲೇಖನಗಳನ್ನೂ ಬರೆಸುವುದಲ್ಲದೆ ಮುದ್ರಿತವಾದಂತಹ ಧಾರ್ಮಿಕ ಗ್ರಂಥಗಳನ್ನು ಪ್ರಚಾರಪಡಿಸುವುದು.

10. ಬಾಲಕ ಬಾಲಕಿಯರಿಗಾಗಿ ಹಿಂದೂ ಧರ್ಮ ಸಿದ್ಧಾಂತಗಳಲ್ಲಿ ಪರೀಕ್ಷೆಗಳನ್ನು ನಡೆಸುವುದು.

ಇತ್ಯಾದಿ, ಇತ್ಯಾದಿ.

ಸತ್ಯಂವದ । ಧರ್ಮಂಚರ ।
ಮಾತೃದೇವೋಭವ । ಪಿತೃದೇವೋಭವ
ಆಚಾರ್ಯದೇವೋಭವ । ಅತಿಥಿದೇವೋಭವ ।

೨. ಸನಾತನ ಧರ್ಮದ ಸಪ್ತಪದಿ

1. ದೇವರಲ್ಲಿ ಭಕ್ತಿ

ಈ ಜಗತ್ತಿಗೆಲ್ಲ ಒಬ್ಬನೇ ದೇವರು. ಅವನು ಸರ್ವಶಕ್ತ, ಸರ್ವೋತ್ತಮ ಸರ್ವಗುಣ ಪರಿಪೂರ್ಣ. ಯಾವ ಭಾಷೆಯು, ಯಾವ ಹೆಸರಿನಿಂದ ಕರೆದರೂ. ಅದು ಅವನದೇ ಹೆಸರು. ಎಲ್ಲ ಶಬ್ದಗಳೂ ಅವನ ಹಿರಿಮೆಯನ್ನೇ ಹಾಡುತ್ತವೆ. ಅಂತಹ ಭಗವಂತನ ಮಹಿಮೆಯನ್ನು ಅರಿತುಕೊಂಡು ಪ್ರೀತಿಸುವುದೇ ಭಕ್ತಿ. ಅದರಿಂದಲೇ ಜೀವನ ಸಾರ್ಥಕ.

2. ನಿರಹಂಕಾರ

ಈ ಅದ್ಭುತವಾದ ವಿಶ್ವ ಅವನ ಸೃಷ್ಟಿಯ ಪವಾಡ. ಭಗವಂತನ ಈ ಮಹಾಶಕ್ತಿಯ ಮುಂದೆ ನಾವು ಸಣ್ಣ ವಸ್ತು ಎಂದು ಅರಿತಾಗ ಅಹಂಕಾರಕ್ಕೆ ಎಡೆಯಿಲ್ಲ. ಎಲ್ಲೆಡೆಯೂ ಭಗವಂತನೇ ಇದ್ದು ಎಲ್ಲವನ್ನೂ ಮಾಡಿಸುತ್ತಾನೆ. ಎಲ್ಲವೂ ಅವನ ಸೊತ್ತು. ಯಾವುದೂ ಯಾರದ್ದೂ ಅಲ್ಲ. ನಾನು – ನನ್ನದು ಎನ್ನುವ ಅಹಂಕಾರ – ಮಮತೆಗಳನ್ನು ತೊರೆದು ವಿನಯಶೀಲನಾಗಿ ಬದುಕಬೇಕು.

3. ಕರ್ತವ್ಯನಿಷ್ಠೆ

ನಮ್ಮ ಪಾಲಿಗೆ ಬಂದ ಕರ್ತವ್ಯವನ್ನು ಮೇಲು–ಕೀಳು ಎಂಬ ಭಾವನೆ ತಾಳದೆ ಪ್ರಾಮಾಣಿಕತೆಯಿಂದ ನಿರ್ವಹಿಸಬೇಕು. ಪ್ರತಿಫಲದ ನಿರೀಕ್ಷೆ ಬೇಡ. ಅವನು ಕೊಟ್ಟಿದ್ದರಲ್ಲಿ ತೃಪ್ತಿಯಿರಲಿ. ಪ್ರತಿಫಲದ ಬಗ್ಗೆ ತೃಪ್ತಿ, ಕರ್ತವ್ಯದ ಬಗ್ಗೆ ಜಾಗ್ರತೆ ಜೀವನದ ಮೂಲಸೂತ್ರ ಆಗಬೇಕು. ದೇವರ ಮೇಲೆ ಭಾರ ಹಾಕಿ ತನ್ನ ಕರ್ತವ್ಯದಿಂದ ವಿಮುಖನಾಗುವುದು ಸಲ್ಲದು.

4. ತೃಪ್ತಿ–ಶಾಂತಿ

ಬೇಕು ಎನ್ನುವ ಬಯಕೆ ಮಿತಿಮೀರಿ ಬೆಳೆದಂತೆ ಬದುಕು ಭಾರವಾಗುತ್ತದೆ. ದುರಾಶೆಯ ಬಳ್ಳಿಯನ್ನು ಬೆಳೆಯಗೊಡಬಾರದು. ಸಿಟ್ಟು ಎಲ್ಲ ಅನರ್ಥಗಳ

ಮೂಲ, ಅದರಿಂದ ಬಾಳಿನ ಶಾಂತಿ ಕೆಡುತ್ತದೆ. ಅಂತಃಶತ್ರುಗಳಾದ ಈ ಕಾಮ ಕ್ರೋಧಗಳನ್ನು ನಿಯಂತ್ರಿಸಬೇಕು. ಅನುಕೂಲದಲ್ಲಿರುವವನನ್ನು ಕಂಡು ಕೊರಗುವ ಬದಲು ನಮಗಿಂತ ಕಷ್ಟದಲ್ಲಿರುವವನನ್ನು ಕಂಡು ಕರುಣೆಯನ್ನು ಬೆಳೆಸಬೇಕು.

5. ಜನತಾ ಸೇವೆ

ದೀನದಲಿತರ ಸೇವೆಯೇ ಭಗವಂತನ ಸೇವೆ. ದುಃಖಿತರನ್ನು ಸಂತೈಸುವುದಕ್ಕಿಂತ ದೊಡ್ಡ ಪುಣ್ಯಕಾರ್ಯ ಇಲ್ಲ. ಜನತೆಯ ಸೇವೆ ಎನ್ನುವುದು ನಾವು ಭಗವಂತನ ರಾಜ್ಯದ ಪ್ರಜೆಗಳಾದುದಕ್ಕಾಗಿ ಭಗವಂತನಿಗೆ ಸಲ್ಲಿಸುವ ಕಂದಾಯ. ನಾವು ತಪ್ಪು ಲೆಕ್ಕ ಒಪ್ಪಿಸಿ ದೇವರ ಕಂದಾಯ ತಪ್ಪಿಸುವ ಕೆಟ್ಟ ಪ್ರಜೆಗಳಾಗಿ ಬಾಳಬಾರದು. ನಾವು ಏನನ್ನೇ ಮಾಡಿದರೂ ಅದು ಭಗವಂತನ ಸೇವೆ ಎಂದು ತಿಳಿದು ಮಾಡಿದಾಗ ಮಾಡುವ ಕೆಲಸದಲ್ಲಿ ಪೂರ್ಣತೆ ಇರುತ್ತದೆ.

6. ಹಿರಿಯರಲ್ಲಿ ಗೌರವ

ಜ್ಞಾನಕ್ಕಿಂತ ಹಿರಿಯ ವಸ್ತು ಇಲ್ಲ. ಎಲ್ಲಿ ಜ್ಞಾನ ಇದೆ, ಅಲ್ಲಿ ಮೊದಲ ಗೌರವ ಸಲ್ಲಬೇಕು. ಮಹಾಕಾರ್ಯಗಳನ್ನು ಮಾಡಬಲ್ಲ ಮಹನೀಯರನ್ನು ಗೌರವಿಸಬೇಕು. ವಯಸ್ಸಿನಲ್ಲಿ ಹಿರಿಯರಾದವರನ್ನು ತುಂಬ ಆದರದಿಂದ ನಡೆಸಿಕೊಳ್ಳಬೇಕು. ತಾಯಿ–ತಂದೆ, ಗುರು–ಹಿರಿಯರಲ್ಲಿ ಗೌರವ, ಬಂಧು–ಬಾಂಧವರಲ್ಲಿ ಸ್ನೇಹ–ವಾತ್ಸಲ್ಯ—ಇವೇ ಜೀವನದ ನಿಜವಾದ ಸಂಪತ್ತು. ಯಾವ ಕಾಲದಲ್ಲೂ ದುಡ್ಡು ದೊಡ್ಡಸ್ತಿಕೆಯು ಮಾನದಂಡ ಆಗಬಾರದು.

7. ಶುದ್ಧಾಚಾರ-ಶುದ್ಧಾಹಾರ

ಶಾಸ್ತ್ರಗಳಲ್ಲಿ ಶ್ರದ್ಧೆಯಿರಬೇಕು. ಆಹಾರ–ವಿಹಾರದಲ್ಲಿ ಶುದ್ಧಿಯಿರಬೇಕು. ಶುದ್ಧವಾದ ಆಚಾರ, ಶುದ್ಧವಾದ ಆಹಾರ ಇದ್ದಲ್ಲಿ ಮಾತ್ರವೇ ಶುದ್ಧವಾದ ಮನಸ್ಸು ಇರುತ್ತದೆ. ಕಳವು, ಸುಳ್ಳು. ಕುಡಿತ, ಹಿಂಸೆ, ವ್ಯಭಿಚಾರ ಇವುಗಳಿಗೆ ಬಲಿಯಾಗದಂತೆ ಎಚ್ಚರವಹಿಸಬೇಕು. ಈ ಪಂಚಪಾತಕಗಳಲ್ಲೇ ಮನುಷ್ಯನನ್ನು ಧರ್ಮದಿಂದ ದೂರತಳ್ಳುವ ಎಲ್ಲ ಶಕ್ತಿಯೂ ಕೇಂದ್ರೀಕೃತವಾಗಿದೆ. ಇಂತಹ ರಾಜಸ–ತಾಮಸ ಆಕರ್ಷಣೆಗಳಿಗೆ ಬಲಿಯಾಗದೆ ಸಾತ್ವಿಕ

ವಾದ ಬಾಳನ್ನು ಬಾಳಲು ಪ್ರಯತ್ನಿಸಬೇಕು. ಆಗ ದೇವರನ್ನು ಹುಡುಕಲು ದೂರ ಹೋಗಬೇಕಾಗಿಲ್ಲ. ಇಂಥವರ ಹೃದಯಮಂದಿರದಲ್ಲಿ ದೇವರು ಯಾವಾಗಲೂ ನೆಲೆಸುತ್ತಾನೆ.

---

೩. ಎಲ್ಲ ಹಿಂದೂ ಸ್ತ್ರೀ ಪುರುಷರೂ ಅವಶ್ಯವಾಗಿ ಅನುಸರಿಸಬೇಕಾದ ಸಂಕ್ಷಿಪ್ತ ದಿನಚರಿ

ಬೆಳಿಗ್ಗೆ ಎದ್ದು ದೇವರನ್ನು ಸ್ಮರಿಸಿ ತುಲಸಿಗೆ ನೀರೆರೆದು ಸುತ್ತುವರಿದು ನಮಸ್ಕರಿಸುವುದು ಮತ್ತು ಗೋವುಗಳಿಗೆ ಕೈಮುಗಿಯುವುದು.

ಬೆಳಿಗ್ಗೆ ಅಥವಾ ಮಧ್ಯಾಹ್ನ ಸ್ನಾನಮಾಡಿ ಗಂಡಸರು ಸೂರ್ಯನಲ್ಲಿ ಇರುವ ಪರಮಾತ್ಮನನ್ನು ಸ್ಮರಿಸಿಕೊಂಡು ಸೂರ್ಯನಾರಾಯಣಾಯ ನಮಃ ಎಂದು ಮೂರು ಸಲ ನೀರಿನಿಂದ ದೇವರಿಗೆ ಅರ್ಘ್ಯವನ್ನು ಬಿಡಬೇಕು. (ಇದನ್ನು ಮನೆಯಲ್ಲಿ ದೇವರ ಪಟದ ಮುಂದೆ ಅಥವಾ ತುಲಸಿ ಕಟ್ಟೆಯ ಮುಂದೆ ಮಾಡಬಹುದು).

ಗೋಪಿಚಂದನ, ತುಲಸೀಮೃತ್ತಿಕೆ ಅಥವಾ ದೇವಸ್ಥಾನದಲ್ಲಿ ದೊರೆಯುವ ಗಂಧ ಮುಂತಾದವುಗಳಿಂದ ಪುಂಡ್ರ ಅಥವಾ ತಿಲಕವನ್ನು ಧರಿಸುವುದು. ಕುಮಾರಿಯರು ಮತ್ತು ಮುತ್ತೈದೆಯರು ಕುಂಕುಮದಿಂದ ತಿಲಕವನ್ನು ಧರಿಸುವುದು.

ಈ ಕೆಳಗಿನ ಮಂತ್ರವನ್ನು ದಿನಕ್ಕೆ ಹತ್ತಕ್ಕೆ ಕಡಿಮೆಯಾಗದಂತೆ ಜಪಿಸುವುದು :

ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ
ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ

(ಇದು ಸರ್ವ ಸುಲಭವಾದ ಮಹಾಮಂತ್ರವಾಗಿದೆ. ಅಪೇಕ್ಷೆ ಇದ್ದವರು ನಾರಾಯಣ ಮಂತ್ರ, ಶಿವಪಂಚಾಕ್ಷರಿ ಮೊದಲಾದವುಗಳನ್ನು ಉಪದೇಶ

ಪಡೆದು ಜಪಿಸಬಹುದು. ಆದರೆ ಜೊತೆಗೆ ಕೆಲವು ನಿಯಮ ನಿರ್ಬಂಧಗಳನ್ನೂ ಪಾಲಿಸಬೇಕಾಗುವುದು).

ಈ ಕೆಳಗಿನ ನಾಮಸ್ಮರಣೆಯನ್ನು ಪ್ರತ್ಯೇಕವಾಗಿ ಮೂರುಸಲವಾದರೂ ಮಾಡುವುದು :

ನಮೋ ಭಗವತೇ ಲಕ್ಷ್ಮೀನಾರಾಯಣಾಯ
ನಮಃ ಪಾರ್ವತೀಪತೇ ಹರ ಹರ ಮಹಾದೇವ

ಇದರ ನಂತರ ಆಹಾರ ಸೇವನೆ.

ರಾತ್ರಿ ಮನೆಯವರೆಲ್ಲರನ್ನೂ ಕೂಡಿಸಿಕೊಂಡು ಐದು ನಿಮಿಷವಾದರೂ ದೇವರ ಭಜನೆಗಳನ್ನು ಮಾಡುವುದು. (ಭಜನೆಯ ಪದ್ಯಗಳನ್ನು ಕೊನೆಗೆ ಮುಂದಿನ ಪುಟಗಳಲ್ಲಿ ಕೊಡಲಾಗಿದೆ).

ದಿನವೂ ಒಮ್ಮೆಯಾದರೂ ಊರಿನ ಯಾವುದೇ ದೇವಾಲಯಕ್ಕೆ ಹೋಗಿ ದೇವರಿಗೆ ನಮಸ್ಕರಿಸುವುದು.

(ಪ್ರತಿಯೊಬ್ಬ ಹಿಂದುವೂ ಇಷ್ಟಾದರೂ ಧಾರ್ಮಿಕ ಆಚರಣೆಯನ್ನು ನಡೆಸಬೇಕೆಂಬ ಉದ್ದೇಶದಿಂದ ಸಂಕ್ಷಿಪ್ತ ರೀತಿಯನ್ನು ಇಲ್ಲಿ ಕೊಡಲಾಗಿದೆ. ಇದಕ್ಕಿಂತ ಹೆಚ್ಚು ವಿಸ್ತಾರದಿಂದ ಮಾಡಬಯಸುವವರು ಆ ರೀತಿಯಲ್ಲೇ ಮಾಡಬಹುದು. ಧಾರ್ಮಿಕ ಆಚರಣೆಯನ್ನು ಹೆಚ್ಚು ಮಾಡಿದಷ್ಟು ಒಳ್ಳೆಯದಿದೆ. ಕೊನೆಯ ಪಕ್ಷ ಇಷ್ಟನ್ನಾದರೂ ಪ್ರತಿಯೊಬ್ಬ ಹಿಂದುವೂ ಪ್ರತಿದಿನವೂ ಆಚರಿಸಬೇಕು).

೪. ಸ್ತೋತ್ರಪಾಠಗಳು

(ಅ) ಶ್ರೀ ವೇಂಕಟೇಶ ಮಂಗಳಾಶಾಸನಮ್

ಶ್ರಿಯಃ ಕಾಂತಾಯ ಕಲ್ಯಾಣನಿಧಯೇ ನಿಧಯೇಽರ್ಥಿನಾಮ್
ಶ್ರೀ ವೇಂಕಟನಿವಾಸಾಯ ಶ್ರೀನಿವಾಸಾಯ ಮಂಗಳಮ್ 1

ತಾತ್ಪರ್ಯ: ಲಕ್ಷ್ಮೀಕಾಂತನೂ ಸಕಲ ಕಲ್ಯಾಣಗಳ ಭಂಡಾರದಂತಿರುವವನೂ ಪ್ರಾರ್ಥಿಸಿದವರಿಗೆ ಸರ್ವವನ್ನೂ ಈಯುವ ಭಂಡಾರವಾಗಿರುವವನೂ ಪವಿತ್ರವಾದ ವೇಂಕಟಾಚಲದಲ್ಲಿ ನೆಲೆಸಿರುವವನೂ ಆದ ಶ್ರೀನಿವಾಸನಿಗೆ ಮಂಗಳವಾಗಲಿ.

ಲಕ್ಷ್ಮೀಸವಿಭ್ರಮಾಲೋಕ ಸುಭ್ರೂವಿಭ್ರಮಚಕ್ಷುಷೇ
ಚಕ್ಷುಷೇ ಸರ್ವಲೋಕಾನಾಂ ವೇಂಕಟೇಶಾಯ ಮಂಗಳಮ್ 2

ತಾ: ಲಕ್ಷ್ಮೀದೇವಿಯ ಸುಂದರವಾದ ನೋಟಕ್ಕೆ ಸರಿಯಾಗಿ ಅದಕ್ಕೆ ಸಮನಾದ ಸುಂದರವಾದ ಹುಬ್ಬುಗಳನ್ನೂ ಕಣ್ಣುಗಳನ್ನೂ ಹೊಂದಿರುವ ಹಾಗೂ ಸರ್ವಲೋಕಗಳಿಗೂ ಕಣ್ಣಿನಂತಿರುವ ಶ್ರೀ ವೇಂಕಟೇಶನೇ, ನಿನಗೆ ಮಂಗಳವಾಗಲಿ.

ಶ್ರೀ ವೇಂಕಟಾದ್ರಿಶೃಂಗಾಗ್ರಮಂಗಳಾಭರಣಾಂಘ್ರಯೇ
ಮಂಗಳಾನಾಂ ನಿವಾಸಾಯ ವೇಂಕಟೇಶಾಯ ಮಂಗಳಮ್ 3

ತಾ: ಪವಿತ್ರವಾದ ವೇಂಕಟಗಿರಿಯ ಶಿಖರಕ್ಕೆ ಮಂಗಳವಾದ ಆಭರಣದಂತಿರುವ ಪಾದಪದ್ಮಗಳುಳ್ಳವನೂ ಸರ್ವಮಂಗಳಗಳಿಗೂ ನೆಲೆಯಂತಿರುವವನೂ ಆದ ವೇಂಕಟೇಶನೇ, ನಿನಗೆ ಮಂಗಳವಾಗಲಿ.

ಸರ್ವಾವಯವಸೌಂದರ್ಯಸಂಪದಾ ಸರ್ವಚೇತಸಾಮ್
ಸದಾ ಸಮ್ಮೋಹನಾಯಾಸ್ತು ವೇಂಕಟೇಶಾಯ ಮಂಗಳಮ್ 4

ತಾ: ಸರ್ವ ಅಂಗಾಂಗಗಳ ಸೌಂದರ್ಯ ಸಂಪತ್ತಿನಿಂದ ಕೂಡಿ, ಸದಾ ಸರ್ವಕಾಲವೂ ಸರ್ವಚೇತನರನ್ನೂ ಮೋಹಗೊಳಿಸುವ ಶ್ರೀ ವೇಂಕಟೇಶನೇ, ನಿನಗೆ ಮಂಗಳವಾಗಲಿ.

ನಿತ್ಯಾಯ ನಿರವದ್ಯಾಯ ಸತ್ಯಾನಂದಚಿದಾತ್ಮನೇ
ಸರ್ವಾಂತರಾತ್ಮನೇ ಶ್ರೀಮದ್ವೇಂಕಟೇಶಾಯ ಮಂಗಳಮ್ 5

ತಾ: ಅಮಲನೂ ಉಚ್ಛೃತಮವಾದ ಗುಣಗಳುಳ್ಳವನೂ ಸಚ್ಚಿದಾನಂದ ಸ್ವರೂಪನೂ ಸರ್ವರ ಅಂತರಾತ್ಮನೂ ಆಗಿರುವ ಲಕ್ಷ್ಮೀಪತಿಯಾದ ವೇಂಕಟೇಶನೇ, ನಿನಗೆ ಮಂಗಳವಾಗಲಿ.

ಸ್ವತಸ್ಸರ್ವವಿದೇ ಸರ್ವಶಕ್ತಯೇ ಸರ್ವಶೇಷಿಣೇ
ಸುಲಭಾಯ ಸುಶೀಲಾಯ ವೇಂಕಟೇಶಾಯ ಮಂಗಳಮ್ 6

ತಾ: ಸರ್ವವನ್ನೂ ಸ್ವತಃ ಅರಿತ ಸರ್ವಜ್ಞನೇ ಸರ್ವಶಕ್ತನೇ ಸರ್ವಶೇಷಿಯೇ ಭಕ್ತರಿಗೆ ಸುಲಭವಾಗಿ ಒಲಿಯುವವನೇ ಒಳ್ಳೆಯ ಶೀಲಗುಣಗಳಿಂದ ಶೋಭಿತನೇ ಶ್ರೀ ವೇಂಕಟೇಶನೇ, ನಿನಗೆ ಮಂಗಳವಾಗಲಿ.

ಪರಸ್ಮೈಬ್ರಹ್ಮಣೇ ಪೂರ್ಣಕಾಮಾಯ ಪರಮಾತ್ಮನೇ
ಪ್ರಯುಂಜೇ ಪರತತ್ತ್ವಾಯ ವೇಂಕಟೇಶಾಯ ಮಂಗಳಮ್ 7

ತಾ: ಪರಬ್ರಹ್ಮನೇ ಸರ್ವೇಚ್ಛೆಗಳನ್ನೂ ಪೂರ್ಣಗೊಳಿಸಿಕೊಂಡಿರುವವನೇ ಸರ್ವರ ಆತ್ಮಗಳಲ್ಲೂ ನೆಲೆಸಿರುವ ಪರಮಾತ್ಮನೇ ಅಲೌಕಿಕ ತತ್ತ್ವಗಳನ್ನು ಅರಿತ ಶ್ರೀ ವೆಂಕಟೇಶಾ, ನಿನಗೆ ಮಂಗಳವುಂಟಾಗಲೆಂದು ಆಶಿಸುತ್ತೇನೆ.

ಅಕಾಲತತ್ತ್ವಮಶ್ರಾನ್ತಮಾತ್ಮನಾಮನುಪಶ್ಯತಾಮ್
ಅತೃಪ್ತ್ಯಮೃತರೂಪಾಯ ವೇಂಕಟೇಶಾಯ ಮಂಗಳಮ್ 8

ತಾ: ಅನಾದಿಕಾಲದಿಂದ ಮೊದಲ್ಗೊಂಡು ನಿನ್ನನ್ನು ದರ್ಶನ ಮಾಡಿದವರಿಗೆಲ್ಲ, ನಿನ್ನ ದರ್ಶನದಿಂದ ತೃಪ್ತಿಯೇ ಆಗುವುದಿಲ್ಲ. ಮತ್ತೆಮತ್ತೆ ನೋಡ

ಬೇಕೆಂದು ಬಯಸುತ್ತಾರೆ. ಇಂಥ ಅಮೃತಸಮವಾದ ಸೌಂದರ್ಯವಂತನಾದ ಶ್ರೀ ವೇಂಕಟೇಶಾ, ನಿನಗೆ ಮಂಗಳವಾಗಲಿ.

ಪ್ರಾಯಃ ಸ್ವಚರಣೌ ಪುಂಸಾಂ ಶರಣ್ಯತ್ವೇನ ಪಾಣಿನಾ
ಕೃಪಯಾದಿಶತೇ ಶ್ರೀಮದ್ವೇಂಕಟೇಶಾಯ ಮಂಗಳಮ್ 9

ತಾ: ಶ್ರೀಮತ್ ವೇಂಕಟೇಶಾ, ನಿನ್ನ ಪಾದಗಳನ್ನು ಆಶ್ರಯಿಸಿ ಬಂದ ವರಿಗೆ ತಕ್ಷಣ ತನ್ನಲ್ಲಿ ಆಶ್ರಯವಿದೆ ಎಂದು ನಿನ್ನ ಅಭಯ ಹಸ್ತದಿಂದ ತೋರಿಸು ತ್ತಿರುವ ನಿನಗೆ ಮಂಗಳವಾಗಲಿ.

ದಯಾಮೃತತರಂಗಿಣ್ಯಾಸ್ತರಂಗೈರಿವ ಶೀತಲೈಃ
ಅಪಾಂಗೈಸ್ಸಿಂಚತೇ ವಿಶ್ವಂ ವೇಂಕಟೇಶಾಯ ಮಂಗಳಮ್ 10

ತಾ: ದಯೆಯೆಂಬ ಅಮೃತ ನದಿಯ ಅಲೆಗಳಂತೆ ಕಡೆಗಣ್ಣಿನ ತಂಪಾದ ನೋಟದಿಂದ ಸಂಪೂರ್ಣ ವಿಶ್ವವನ್ನೇ ತೋಯಿಸುತ್ತಿರುವ ಶ್ರೀ ವೇಂಕಟೇಶನೇ, ನಿನಗೆ ಮಂಗಳವಾಗಲಿ.

ಸ್ರಗ್ಭೂಷಾಂಬರಹೇತೀನಾಂ ಸುಷಮಾವಹಮೂರ್ತಯೇ
ಸರ್ವಾರ್ತಿಶಮನಾಯಾಸ್ತು ವೇಂಕಟೇಶಾಯ ಮಂಗಳಮ್ 11

ತಾ: ವೇಂಕಟೇಶ, ನೀನು ಧರಿಸಿರುವ ಹಾರ, ಕುಂಡಲ, ಶಂಖ, ಚಕ್ರ, ಗದೆ, ರತ್ನಖಚಿತವಾದ ಆಭರಣಾದಿಗಳಿಗೇ ಕಾಂತಿಯನ್ನುಂಟುಮಾಡುವ ಅಂಗಾಂಗಗಳನ್ನುಳ್ಳ ನಿನಗೆ ಮಂಗಳವಾಗಲಿ.

ಶ್ರೀವೈಕುಂಠವಿರಕ್ತಾಯ ಸ್ವಾಮಿಪುಷ್ಕರಿಣೀತಟೇ
ರಮಯಾ ರಮಮಾಣಾಯ ವೇಂಕಟೇಶಾಯ ಮಂಗಳಮ್ 12

ತಾ: ಪವಿತ್ರವಾದ ವೈಕುಂಠವನ್ನೇ ತೊರೆದು, ಸ್ವಾಮಿ ಪುಷ್ಕರಿಣಿಯ ದಡದಲ್ಲಿ ನೆಲೆಸಿ, ಲಕ್ಷ್ಮಿಯೊಂದಿಗೆ ರಮಿಸುತ್ತಿರುವ ವೇಂಕಟೇಶನೇ, ನಿನಗೆ ಮಂಗಳವಾಗಲಿ.

ಶ್ರೀಮತ್ಸುಂದರಜಾಮಾತೃಮುನಿಮಾನಸವಾಸಿನೇ
ಸರ್ವಲೋಕನಿವಾಸಾಯ ಶ್ರೀನಿವಾಸಾಯ ಮಂಗಳಮ್ 13

ತಾ: ಜಾಮಾತೃ ಮುನಿವರ್ಯರ ಹೃದಯದಲ್ಲಿಯೇ ವಾಸಿಸುವವನೂ ಸರ್ವಲೋಕಗಳಲ್ಲಿಯೂ ನೆಲೆಸಿರುವವನೂ ಆದ ಶ್ರೀನಿವಾಸನೇ, ನಿನಗೆ ಮಂಗಳವಾಗಲಿ.

ಮಂಗಳಾಶಾಸನಪರೈರ್ಮದಾಚಾರ್ಯಪುರೋಗಮೈಃ॥
ಸರ್ವೈಶ್ಚ ಪೂರ್ವೈರಾಚಾರ್ಯೈಸ್ಸತ್ಕೃತಾಯಾಸ್ತು ಮಂಗಳಮ್ 14

ತಾ: ಮಂಗಳಾಶಾಸನದಲ್ಲಿ ತಲ್ಲೀನರಾಗಿದ್ದ ನಮ್ಮೆಲ್ಲರ ಹಿರಿಯ ಆಚಾರ್ಯರುಗಳಿಂದ ಸ್ತುತಿತನಾದ ವೇಂಕಟೇಶನೇ, ನಿನಗೆ ಮಂಗಳವಾಗಲಿ.

(ಆ) ಅಚ್ಯುತಾಷ್ಟಕಮ್

ಅಚ್ಯುತಂ ಕೇಶವಂ ರಾಮನಾರಾಯಣಂ
ಕೃಷ್ಣದಾಮೋದರಂ ವಾಸುದೇವಂ ಹರಿಮ್
ಶ್ರೀಧರಂ ಮಾಧವಂ ಗೋಪಿಕಾವಲ್ಲಭಂ
ಜಾನಕೀನಾಯಕಂ ರಾಮಚಂದ್ರಂ ಭಜೇ ॥1॥

ಅಚ್ಯುತಂ ಕೇಶವಂ ಸತ್ಯಭಾಮಾಧವಂ
ಮಾಧವಂ ಶ್ರೀಧರಂ ರಾಧಿಕಾರಾಧಿತಮ್
ಇಂದಿರಾಮಂದಿರಂ ಚೇತಸಾ ಸುಂದರಂ
ದೇವಕೀನಂದನಂ ನಂದಜಂ ಸಂದಧೇ ॥2॥

ವಿಷ್ಣವೇ ಜಿಷ್ಣವೇ ಶಂಖಿನೇ ಚಕ್ರಿಣೇ
ರುಕ್ಮಿಣೀರಾಗಿಣೇ ಜಾನಕೀಜಾನಯೇ
ಬಲ್ಲವೀವಲ್ಲಭಾಯಾರ್ಚಿತಾಯಾತ್ಮನೇ
ಕಂಸವಿಧ್ವಂಸಿನೇ ವಂಶಿನೇ ತೇ ನಮಃ ॥3॥

ಕೃಷ್ಣ ಗೋವಿಂದ ಹೇ ರಾಮ ನಾರಾಯಣ
ಶ್ರೀಪತೇ ವಾಸುದೇವಾಜಿತ ಶ್ರೀನಿಧೇ
ಅಚ್ಯುತಾನಂತ ಹೇ ಮಾಧವಾಧೋಕ್ಷಜ
ದ್ವಾರಕಾನಾಯಕ ದ್ರೌಪದೀರಕ್ಷಕ ॥4॥

ತಾ: ಅಚ್ಯುತನಿಗೆ ಕೇಶವ, ರಾಮ, ನಾರಾಯಣ, ವಿಷ್ಣು, ಜಿಷ್ಣು ಮುಂತಾದ ಹಲವಾರು ನಾಮಗಳಿವೆ. ರಾಮಾವತಾರದಲ್ಲಿ ಜಾನಕೀಪತಿಯಾದ, ಕೃಷ್ಣಾವತಾರದಲ್ಲಿ ದೇವಕೀನಂದನನೂ ದ್ವಾರಕಾಧೀಶನೂ ದ್ರೌಪದೀರಕ್ಷಕನೂ ರುಕ್ಮಿಣಿ ಸತ್ಯಭಾಮಾ ಮುಂತಾದವರಿಗೆ ವಲ್ಲಭನೂ ಆದ ಅಚ್ಯುತನ ಭಜನೆ ಧ್ಯಾನ, ನಮಸ್ಕಾರಗಳನ್ನು ಮಾಡುವೆನು.

ರಾಕ್ಷಸಕ್ಷೋಭಿತಃ ಸೀತಯಾ ಶೋಭಿತೋ
ದಂಡಕಾರಣ್ಯಭೂಪುಣ್ಯತಾಕಾರಣಮ್
ಲಕ್ಷ್ಮಣೇನಾನ್ವಿತೋ ವಾನರೈಃ ಸೇವಿತೋ-
ಗಸ್ತ್ಯಸಂಪೂಜಿತೋ ರಾಘವಃ ಪಾತು ಮಾಮ್ ॥5॥

ತಾ: ಸೀತಾಲಕ್ಷ್ಮಣ ಸಮೇತನಾಗಿ ದಂಡಕಾರಣ್ಯದಲ್ಲಿ ಸಂಚರಿಸಿ ಆ ನೆಲವನ್ನು ಪಾವನಗೊಳಿಸಿ ರಾಕ್ಷಸರ ಉಪದ್ರವ ಕಾಲದಲ್ಲಿ ವಾನರರ ಸೇವೆಯನ್ನು ಸ್ವೀಕರಿಸಿ ಅಗಸ್ತ್ಯ ಮುನಿಗಳಿಂದ ಪೂಜಿತನಾದ ಶ್ರೀ ರಾಮಚಂದ್ರನು ನನ್ನನ್ನು ರಕ್ಷಿಸಲಿ.

ಧೇನುಕಾರಿಷ್ಟಕೋsನಿಷ್ಟಕೃದ್ದ್ವೇಷಿಣಾಂ
ಕೇಶಿಹಾ ಕಂಸಹೃದ್ವಂಶಿಕಾವಾದಕಃ
ಪೂತನಾಶೋಷಕಃ ಸೂರಜಾಖೇಲನೋ
ಬಾಲಗೋಪಾಲಕಃ ಪಾತು ಮಾಂ ಸರ್ವದಾ ॥6॥

ತಾ: ಧೇನುಕನನ್ನು ಕೊಂದು, ಪೂತನಿಯ ಎದೆಯನ್ನು ಹೀರಿದ, ಯಮುನೆಯಲ್ಲಿ ವಿಹರಿಸಿದ ಬಾಲಗೋಪಾಲನು ನನ್ನನ್ನು ಸದಾ ರಕ್ಷಿಸಲಿ.

ವಿದ್ಯುದುದ್ದ್ಯೋತವತ್ ಪ್ರಸ್ಫುರದ್ವಾಸಸಂ
ಪ್ರಾವೃಡಮ್ಭೋದವತ್ಪ್ರೋಲ್ಲಸದ್ವಿಗ್ರಹಮ್
ವನ್ಯಯಾ ಮಾಲಯಾ ಶೋಭಿತೋರಃಸ್ಥಲಂ
ಲೋಹಿತಾಂಘ್ರಿದ್ವಯಂ ವಾರಿಜಾಕ್ಷಂ ಭಜೇ ॥7॥

ತಾ: ಮಿಂಚಿನಂತೆ ಹೊಳೆವ ಪೀತಾಂಬರ ಉಟ್ಟು, ಎದೆಯಲ್ಲಿ ವನಮಾಲೆ ಧರಿಸಿದ, ಮಳೆಗಾಲದ ಮೋಡದಂತೆ ಕಾಣುವ ಶರೀರ ಕಾಂತಿ ಮತ್ತು ಕೆಂಬಣ್ಣದ ಪಾದಗಳುಳ್ಳ ಪುಂಡರೀಕಾಕ್ಷನನ್ನು ಭಜಿಸುತ್ತೇನೆ.

ಕುಂಚಿತೈಃ ಕುಂತಲೈರ್ಭ್ರಾಜಮಾನಾನನಂ
ರತ್ನಮೌಲಿಂ ಲಸತ್ಕುಂಡಲಂ ಗಂಡಯೋಃ
ಹಾರಕೇಯೂರಕಂ ಕಂಕಣಪ್ರೋಜ್ಜ್ವಲಂ
ಕಿಂಕಿಣೀ ಮಂಜುಲಂ ಶ್ಯಾಮಲಂ ತಂ ಭಜೇ ॥8॥

ತಾ: ಮುಂಗುರುಳುಗಳಿಂದ ಶೋಭಿಸುವ ಮುಖ, ರತ್ನಭೂಷಿತ ಶಿರಸ್ಸು, ಕುಂಡಲಗಳಿಂದೊಪ್ಪುವ ಕಪೋಲಗಳು ಮತ್ತು ಹಾರ ಕೇಯೂರ ಕಂಕಣ ಗೆಜ್ಜೆಗಳಿಂದ ಹೊಳೆವ ನೀಲ ಶರೀರವುಳ್ಳ ಕೃಷ್ಣನನ್ನು ಧ್ಯಾನಿಸುತ್ತೇನೆ.

ಅಚ್ಯುತಸ್ಯಾಷ್ಟಕಂ ಯಃ ಪಠೇದಿಷ್ಟದಂ
ಪ್ರೇಮತಃ ಪ್ರತ್ಯಹಂ ಪೂರುಷಃ ಸಸ್ಪೃಹಮ್
ವೃತ್ತತಃ ಸುಂದರಂ ಕರ್ತೃವಿಶ್ವಂಭರಂ
ತಸ್ಯ ವಶ್ಯೋ ಹರಿರ್ಜಾಯತೇ ಸತ್ವರಮ್ ॥9॥

ತಾ: ಸುಂದರ ವೃತ್ತದಲ್ಲಿ ರಚಿತವಾಗಿದ್ದು ಅಭೀಷ್ಟದಾಯಕವಾದ ಈ ಅಚ್ಯುತಾಷ್ಟಕವನ್ನು ಭಕ್ತಿಯಿಂದ ಪ್ರತಿದಿನ ಪಠಿಸುವವನಿಗೆ ಜಗತ್ತಿನ ಕರ್ತನೂ ಧಾರಕನೂ ಪೋಷಕನೂ ಆದ ಹರಿಯು ಬೇಗನೆ ವಶವಾಗುವನು.

—

(೩) ಶ್ರೀ ದ್ವಾದಶ ಸ್ತೋತ್ರಮ್

ಅಥ ಷಷ್ಠೋಽಧ್ಯಾಯಃ

ದೇವಕಿನಂದನ ನಂದಕುಮಾರ
ವೃಂದಾವನಾಂಚನ ಗೋಕುಲಚಂದ್ರ
ಕಂದಫಲಾಶನ ಸುಂದರರೂಪ
ನಂದಿತಗೋಕುಲ ವಂದಿತಪಾದ

ಇಂದ್ರಸುತಾವಕ ನಂದಕ ಹಸ್ತ
ಚಂದನಚರ್ಚಿತ ಸುಂದರಿನಾಥ
ಇಂದೀವರೋದರದಲನಯನ
ಮಂದರಧಾರಿನ್ ಗೋವಿಂದ ವಂದೇ

ಚಂದ್ರಶತಾನನ ಕುಂದಸುಹಾಸ
ನಂದಿತದೈವತಾನಂದ ಸುಪೂರ್ಣ

ತಾ: ವೇದಪ್ರತಿಪಾದ್ಯನಾದ ಶ್ರೀಕೃಷ್ಣನೇ ನೀನು ತಾಯಿಯಾದ ದೇವಕಿಯನ್ನು ಜೈಲಿನಿಂದ ಬಿಡಿಸಿ ಆನಂದಗೊಳಿಸಿರುವವನು. ಬಾಲ್ಯದಲ್ಲಿ ನಿನ್ನನ್ನು ನಂದಗೋಪನು ಪೋಷಣೆ ಮಾಡಿದ್ದರಿಂದ ಅವನ ಮಗನೆಂದು ಪ್ರಸಿದ್ಧನಾದವನು. ವೃಂದಾವನದಲ್ಲಿ ಸಂಚಾರ ಮಾಡಿದವನು. ನಿನ್ನ ಸಂಚಾರದಿಂದ ವೃಂದಾವನವು ಪೂಜ್ಯವಾಗಿರುವುದು. ಗೋಕುಲಕ್ಕೆ ಚಂದ್ರನಂತೆ ಸಂತೋಷವನ್ನುಂಟುಮಾಡಿದವನು. ವೃಂದಾವನದಲ್ಲಿ ಗಡ್ಡೆಹಣ್ಣುಗಳನ್ನು ತಿಂದವನು. ಸುಂದರವಾದ ಆಕೃತಿಯುಳ್ಳವನು. ಕೊಳಲಿನ ಧ್ವನಿಯಿಂದ ಹಸುಗಳನ್ನು ಸಂತೋಷಗೊಳಿಸಿದವನು. ಪೂತನೆ ಮೊದಲಾದ ದಾನವರ ವಧೆಯಿಂದ ಸಂತೋಷಗೊಂಡ ನಾರದ ಮೊದಲಾದ ಮುನಿಗಳು ನಿನ್ನನ್ನು ವಂದಿಸಿರುವರು. ಭಾರತ ಯುದ್ಧದಲ್ಲಿ ಅರ್ಜುನನಿಗೆ ಸಾರಥಿಯಾಗಿ ಭಗದತ್ತ, ಕರ್ಣಾದಿಗಳು ಪ್ರಯೋಗಿಸಿದ ಅಸ್ತ್ರಗಳಿಂದ ಅವನನ್ನು ಕಾಪಾಡಿದವನು. ನಂದಕವೆಂಬ ಕತ್ತಿಯನ್ನು ಹಿಡಿದವನು. ಗೋವರ್ಧನ ಪರ್ವತವನ್ನು ಎತ್ತಿದ್ದರಿಂದ ಗೋಕು

ಲದ ಜನರಿಗೆ ಆನಂದವನ್ನುಂಟುಮಾಡಿದ ಹಸ್ತವುಳ್ಳವನು. ಗಂಧವನ್ನು ಹಚ್ಚಿಕೊಂಡು ಸುವಾಸನೆಯಾಗಿರುವವನು. ಹದಿನಾರು ಸಾವಿರದ ಎಂಟು ಮಂದಿ ಪರುಣಿಯರಿಗೆ ಪ್ರಿಯನಾದವನು. ಕನ್ನೈದಿಲೆ ಹೂವಿನ ಒಳಭಾಗದಂತೆ ಕಣ್ಣುಗಳುಳ್ಳವನು. ಮೂಢ ಹಸುಗಳನ್ನು ಆನಂದಗೊಳಿಸಿದ ಗೋವರ್ಧನ ಪರ್ವತವನ್ನು ಎತ್ತಿದವನು. ನೂರು ಚಂದ್ರರಂತೆ ಶೋಭಿಸುವ ಮುಖ ಉಳ್ಳವನು. ಮಲ್ಲಿಗೆ ಹೂವಿನಂತೆ ಬೆಳ್ಳಗೆ ನಗುವುಳ್ಳವನು. ದೇವತೆಗಳನ್ನು ಸಂತೋಷಗೊಳಿಸಿದವನು. ಅಂತಹ ಪೂರ್ಣಾನಂದವುಳ್ಳ ನಿನಗೆ ನಮಸ್ಕಾರ ಮಾಡುತ್ತೇನೆ.

ಮತ್ಸ್ಯಕರೂಪ ಲಯೋದವಿಹಾರಿನ್
ವೇದವಿನೇತ್ರಚತುರ್ಮುಖವಂದ್ಯ 1

ತಾ: ಹರಿಯೇ, ನೀನು ಮತ್ಸ್ಯಾವತಾರ ಮಾಡಿ ಚಾಕ್ಷುಷಮನ್ವಂತರದಲ್ಲಿ ಸಮುದ್ರದಲ್ಲಿ ವಿಹರಿಸಿ ವೇದವನ್ನು ಉದ್ಧಾರಮಾಡಿ, ಸಂತೋಷಗೊಂಡ ಬ್ರಹ್ಮದೇವರಿಂದ ವಂದಿಸಲ್ಪಟ್ಟಿರುವಿ. ಅಂತಹ ನಿನ್ನನ್ನು ನಮಸ್ಕರಿಸುತ್ತೇನೆ.

ಕೂರ್ಮಸ್ವರೂಪಕ ಮಂದರಧಾರಿನ್
ಲೋಕವಿಧಾರಕ ದೇವವರೇಣ್ಯ 2

ತಾ: ಹರಿಯೇ, ನೀನು ಆಮೆಯಾಗಿ ಅವತಾರಮಾಡಿ ಅಮೃತಮಥನದ ಸಮಯದಲ್ಲಿ ಮುಳುಗುತ್ತಿದ್ದ ಮಂದರ ಪರ್ವತವನ್ನು ಎತ್ತಿದವನು. ಬ್ರಹ್ಮಾದಿ ದೇವತೆಗಳಿಗೆ ಆಶ್ರಯಿಸಲು ಯೋಗ್ಯನು; ಇಂತಹ ನಿನ್ನನ್ನು ನಮಸ್ಕಾರ ಮಾಡುತ್ತೇನೆ.

ಸೂಕರರೂಪಕ ದಾನವಶತ್ರೋ
ಭೂಮಿವಿಧಾರಕ ಯಜ್ಞವರಾಂಗ 3

ತಾ: ಹರಿಯೇ, ನೀನು ವರಾಹರೂಪನಾಗಿ ಭೂಮಿಯನ್ನು ಅಪಹರಿಸಿದ ಹಿರಣ್ಯಾಕ್ಷನನ್ನು ಕೊಂದಿರುವಿ. ಹಲ್ಲುಗಳಿಂದ ನೆಲವನ್ನು ಕೆರೆದಿರುವಿ. ನಿನಗೆ ಯಜ್ಞಾಭಿಮಾನಿ ದೇವತೆಗಳು ಉತ್ತಮವಾದ ಅಂಗಗಳಾಗಿರುವರು. ಅಂತಹ ನಿನ್ನನ್ನು ವಂದಿಸುತ್ತೇನೆ.

ದೇವ ನೃಸಿಂಹ ಹಿರಣ್ಯಕಶಶತ್ರೋ
ಸರ್ವಭಯಾಂತಕ ದೈವತಬಂಧೋ 4

ತಾ: ನಾರಾಯಣ, ನೀನು ನರಸಿಂಹನಾಗಿ ನಿನ್ನ ಭಕ್ತನಾದ ಪ್ರಹ್ಲಾದ ಮೊದಲಾದವರಿಗೆ ಹಿಂಸೆ ಮಾಡುತ್ತಿದ್ದ ಹಿರಣ್ಯಕಶಿಪುವನ್ನು ಕೊಂದಿರುವವನು. ಎಲ್ಲ ಭಯಗಳನ್ನು ನಿವಾರಿಸುವವನು. ದೇವತೆಗಳಿಗೆ ಬಂಧುವಾಗಿರುವವನು ನಿನ್ನನ್ನು ವಂದಿಸುತ್ತೇನೆ.

ವಾಮನ ವಾಮನ ಮಾಣವವೇಷ
ದೈತ್ಯವರಾಂತಕ (ಕಾರಣಭೂತ) ಕಾರಣರೂಪ 5

ತಾ: ವಾಮನಾವತಾರ ಮಾಡಿದ ಹರಿಯೇ, ನೀನು ಉತ್ತಮವಾದ ಜ್ಞಾನ, ಭಕ್ತ್ಯಾದಿಗಳಿಂದ ಭಕ್ತರ ವಶವಾಗುವವನು. ಬ್ರಹ್ಮಚಾರಿ ವೇಷವನ್ನು ತಾಳಿ ದೈತ್ಯ ಶ್ರೇಷ್ಠನಾದ ಬಲಿರಾಜನನ್ನು ನಿಗ್ರಹಿಸಿದವನು. ಇಂದ್ರನಿಗೆ ಐಶ್ವರ್ಯವನ್ನು ಕೊಡಲು ಕಾರಣನಾದವನು. ಅಂತಹ ನಿನ್ನನ್ನು ವಂದಿಸುವೆನು.

ರಾಮ ಭೃಗೂದ್ವಹ ಸೂರ್ಜಿತದೀಪ್ತೇ
ಕ್ಷತ್ರಕುಲಾಂತಕ ಶಂಭುವರೇಣ್ಯ 6

ತಾ: ಪರಶುರಾಮ, ನೀನು ಹುಟ್ಟಿದ ಭೃಗುವಂಶವನ್ನು ಉದ್ಧಾರ ಮಾಡಿರುವಿ. ಹೆಚ್ಚಾದ ಕಾಂತಿಯುಳ್ಳವನಾಗಿರುವಿ. ತಂದೆಯನ್ನು ಸಂಹರಿಸಿದ ಕಾರ್ತವೀರ್ಯಾರ್ಜುನನ ಮೇಲಿನ ದ್ವೇಷದಿಂದ ಇಪ್ಪತ್ತೊಂದು ಸಾರಿ ಕ್ಷತ್ರಿಯ ವಂಶವನ್ನು ನಿರ್ಮೂಲ ಮಾಡಿರುವಿ. ರುದ್ರ ದೇವರಿಂದ ಪ್ರಾರ್ಥಿಸಲು ಯೋಗ್ಯನಾಗಿರುವಿ. (ರುದ್ರ ದೇವರಿಗಿಂತ ಶ್ರೇಷ್ಠನಾಗಿರುವಿ). ಇಂತಹ ನಿನ್ನನ್ನು ನಮಸ್ಕಾರ ಮಾಡುತ್ತೇನೆ.

ರಾಘವ ರಾಘವ ರಾಕ್ಷಸಶತ್ರೋ
ಮಾರುತಿವಲ್ಲಭ ಜಾನಕಿಕಾಂತ 7

ತಾ: ರಾಮಚಂದ್ರ, ನೀನು ರಘುರಾಜನ ವಂಶದಲ್ಲಿ ಹುಟ್ಟಿರುವವನು, ರಾವಣ ಮೊದಲಾದ ದುಷ್ಟ ರಾಕ್ಷಸರಿಗೆ ಶತ್ರುವಾದವನು. ವಾಯುತನಯನಾದ ಆಂಜನೇಯನಲ್ಲಿ ಅತಿಶಯ ಪ್ರೀತಿಯುಳ್ಳವನು. ಜನಕರಾಜನ ಮಗಳಾದ ಸೀತೆಯ ಪತಿಯು. ಇಂತಹ ನಿನ್ನನ್ನು ವಂದಿಸುತ್ತೇನೆ.

ದೇವಕೀನಂದನ ಸುಂದರರೂಪ
ರುಕ್ಮಿಣೀವಲ್ಲಭ ಪಾಂಡವಬಂಧೋ 8

ತಾ: ಶ್ರೀ ಕೃಷ್ಣ, ನೀನು ದೇವಕಿಯ ಮಗನಾಗಿರುವಿ. ಸುಂದರವಾದ ಆಕೃತಿಯುಳ್ಳವನು. ರುಕ್ಮಿಣಿದೇವಿಯ ಪತಿ. ಪಾಂಡವರು ನಿನ್ನ ಸೋದರ ಮಾವನ ಮಕ್ಕಳಾದುದರಿಂದ ನಿನಗೆ ಸಂಬಂಧಿಕರಾಗಿರುವರು. ಇಂತಹ ನಿನಗೆ ನಮಸ್ಕಾರ ಮಾಡುತ್ತೇನೆ.

ದೈತ್ಯವಿಮೋಹಕ ನಿತ್ಯಸುಖಾದೇ
ದೇವಸುಭೋಧಕ ಬುದ್ಧಸ್ವರೂಪ 9

ತಾ: ಬುದ್ಧರೂಪಿಯಾಗಿ ಅವತರಿಸಿದ ಹರಿಯೇ, ನೀನು ಪ್ರಪಂಚದಲ್ಲಿ ಅಧಿಕಾರಿಗಳಲ್ಲದ ದೈತ್ಯರು ವೇದಮಾರ್ಗವನ್ನು ಅನುಸರಿಸಲು ಅವರಿಗೆ ವೇದ ವಿರುದ್ಧ ಶಾಸ್ತ್ರವನ್ನು ರಚಿಸಿ ಭ್ರಾಂತಿಗೊಳಿಸಿದವನು. ಮೋಕ್ಷವನ್ನು ಕೊಡುವವನು. ಬ್ರಹ್ಮಾದಿ ದೇವತೆಗಳಿಗೆ ಬ್ರಹ್ಮತತ್ವವನ್ನು ಚೆನ್ನಾಗಿ ತಿಳಿಸುವವನು. ಇಂತಹ ನಿನ್ನನ್ನು ವಂದಿಸುತ್ತೇನೆ.

ದುಷ್ಟಕುಲಾಂತಕ ಕಲ್ಕಿಸ್ವರೂಪ
ಧರ್ಮವಿವರ್ಧನ ಮೂಲಯುಗಾದೇ 10

ತಾ: ಕಲ್ಕಿರೂಪನಾದ ನಾರಾಯಣನೇ, ನೀನು ಕಲಿಯುಗದ ಕೊನೆಯಲ್ಲಿ ಮ್ಲೇಂಛರಾಗಿ ಹುಟ್ಟಿ ಕೊಬ್ಬಿದ ದೈತ್ಯರ ವಂಶವನ್ನು ನಾಶಮಾಡುವಿ. ಧರ್ಮವನ್ನು ಹೆಚ್ಚಿಸುವಿ. ಕೃತ, ತ್ರೇತಾ, ದ್ವಾಪರ, ಕಲಿ ಎಂಬ ನಾಲ್ಕು ಯುಗಗಳಲ್ಲಿ ಮೊದಲನೇ ಯುಗವಾದ ಕೃತಯುಗವು ಆರಂಭವಾಗಲು ಕಾರಣನಾಗಿರುವಿ ಇಂತಹ ನಿನ್ನನ್ನು ನಮಸ್ಕಾರ ಮಾಡುತ್ತೇನೆ,

ನಾರಾಯಣಾಮಲಕಾರಣಮೂರ್ತೇ

ಪೂರ್ಣಗುಣಾರ್ಣವ ನಿತ್ಯಸುಭೋಧ 11

ತಾ : ನಾರಾಯಣ, ನೀನು ಸಜ್ಜನರಿಗೆ ಇಷ್ಟವಾದುದನ್ನೂ ದುರ್ಜನರಿಗೆ ಕೆಟ್ಟದನ್ನೂ ಕೊಡುವವನು. ಸಮುದ್ರದಂತೆ ಪೂರ್ತಿ ಗುಣಗಳುಳ್ಳವನು. ಶಾಶ್ವತವಾದ ವಿಲಕ್ಷಣ ತತ್ವಜ್ಞಾನವುಳ್ಳವನು. ಇಂತಹ ನಿನಗೆ ನಮಸ್ಕಾರ ಮಾಡುತ್ತೇನೆ.

ಆನಂದತೀರ್ಥಮುನೀಂದ್ರಕೃತಾ

ಹರಿಗಾಥಾ ಪಾಪಹರಾ ಶುಭನಿತ್ಯಸುಖಾರ್ಥಾ

ಇತಿ ಶ್ರೀ ದ್ವಾದರಸ್ತೋತ್ರೇ ಷಷ್ಠೋಧ್ಯಾಯಃ 12

ತಾ : ಈ ನಾರಾಯಣನ ಸ್ತೋತ್ರವನ್ನು ಸಂಸಾರವನ್ನು ನೀಗಿಸುವ ಚರಿತ್ರೆಯುಳ್ಳ ಪೂರ್ಣಪ್ರಜ್ಞ ಮುನಿಗಳು ರಚಿಸಿದ್ದಾರೆ. ಇದನ್ನು ಪಠಿಸಿದರೆ ಸಕಲಪಾಪಗಳು ಪರಿಹಾರವಾಗಿ ಮಂಗಳಕರವಾದ ಮೋಕ್ಷಸುಖವು ಲಭಿಸುವುದು.

ಇಲ್ಲಿಗೆ ಶ್ರೀ ದ್ವಾದಶ ಸ್ತೋತ್ರದ ಆರನೆ ಅಧ್ಯಾಯದ ಕನ್ನಡ ಟೀಕೆಯು ಮುಗಿದುದು.

(ಈ) ಮುಕುಂದಮಾಲಾ

ನಾಲ್ಕು ಪದ್ಯಗಳು

ಜಯತು ಜಯತು ದೇವೋ ದೇವಕೀನಂದನೋಽಯಂ
ಜಯತು ಜಯತು ಕೃಷ್ಣೋ ವೃಷ್ಣಿವಂಶಪ್ರದೀಪಃ
ಜಯತು ಜಯತು ಮೇಘಶಾಮಲಃ ಕೋಮಲಾಂಗೋ
ಜಯತು ಜಯತು ಪೃಥ್ವೀಭಾರನಾಶೋ ಮುಕುಂದಃ

ತಾ: ದೇವಕಿಗೆ ನಂದನ (ಸಂತೋಷವನ್ನುಂಟು ಮಾಡುವ ಮಗನಾದ ಈ ದೇವನು ಜಯಿಸಲಿ, ಜಯಿಸಲಿ. ವೃಷ್ಣಿಗಳ ವಂಶಕ್ಕೆ ಪ್ರದೀಪ (ದೊಡ್ಡ ಬೆಳಕು) ನಾದ ಕೃಷ್ಣನು ಜಯಿಸಲಿ, ಜಯಿಸಲಿ. ಮೇಘದಂತೆ ಶ್ಯಾಮಲವು (ಹಿತವಾದ ಕಪ್ಪು) ಕೋಮಲವೂ ಆದ ಅಂಗಗಳುಳ್ಳವನು ಜಯಿಸಲಿ ಜಯಿಸಲಿ. ಪೃಥ್ವಿಯ ಭಾರವನ್ನು ನಾಶಮಾಡಿದ ಮುಕುಂದನು ಜಯಿಸಲಿ ಜಯಿಸಲಿ.

ಹೇ ಗೋಪಾಲಕ ಹೇ ಕೃಪಾಜಲನಿಧೇ ಹೇ ಸಿಂಧುಕನ್ಯಾಪತೇ
ಹೇ ಕಂಸಾಂತಕ ಹೇ ಗಜೇಂದ್ರ ಕರುಣಾಪಾರೀಣ ಹೇ ಮಾಧವ
ಹೇ ರಾಮಾನುಜ ಹೇ ಜಗತ್ತ್ರಯಗುರೋ ಹೇ ಪುಂಡರೀಕಾಕ್ಷ ಮಾಂ
ಹೇ ಗೋಪೀಜನನಾಥ ಪಾಲಯ ಪರಂ ಜಾನಾಮಿ ನ ತ್ವಾಂ ವಿನಾ

ತಾ: ಎಲೈ ಗೋಪಾಲಕನೇ ಎಲೈ ಕೃಪಾಸಮುದ್ರನೇ ಎಲೈ ಸಮುದ್ರ ಮಗಳಾದ ಲಕ್ಷ್ಮಿಯ ಪತಿಯೇ ಎಲೈ ಕಂಸನನ್ನು ಕೊಂದವನೇ ಎಲೈ ಗಜೇಂದ್ರನಲ್ಲಿ ಅತಿಶಯವಾದ ಕರುಣೆಯನ್ನು ತೋರಿದವನೇ ಎಲೈ ಮಾಧವನೆ (ಲಕ್ಷ್ಮೀಪತಿಯೇ) ಎಲೈ ಬಲರಾಮನ ತಮ್ಮನೇ ಎಲೈ ಮೂರು ಲೋಕಗಳಿಗು ಗುರುವಾದವನೇ ಎಲೈ ಕಮಲದಂತೆ ಕಣ್ಣುಳ್ಳವನೇ ಎಲೈ ಗೋಪೀ ಜನಗ ಸ್ವಾಮಿಯೇ ನನ್ನನ್ನು ಪಾಲಿಸು. ನಿನ್ನನ್ನು ಬಿಟ್ಟು ಬೇರೊಬ್ಬರನ್ನು ನಾನ ಅರಿಯೆ.

ನಮಾಮಿ ನಾರಾಯಣಪಾದಪಂಕಜಂ
ಕರೋಮಿ ನಾರಾಯಣಪೂಜನಂ ಸದಾ
ವದಾಮಿ ನಾರಾಯಣನಾಮನಿರ್ಮಲಂ
ಸ್ಮರಾಮಿ ನಾರಾಯಣತತ್ತ್ವಮವ್ಯಯಂ

ತಾ: ನಾನು ನಾರಾಯಣನ ಪಾದಪಂಕಜವನ್ನು ನಮಸ್ಕರಿಸುತ್ತೇನೆ, ನಾರಾಯಣನ ಪೂಜೆಯನ್ನು ಮಾಡುತ್ತೇನೆ, ನಿರ್ಮಲವಾದ ನಾರಾಯಣ ನಾಮವನ್ನು ಹೇಳುತ್ತೇನೆ, ಅವ್ಯಯವಾದ (ನಾಶವಿಲ್ಲದ) ನಾರಾಯಣ ತತ್ತ್ವವನ್ನು ಸ್ಮರಿಸುತ್ತೇನೆ.

ಶ್ರೀನಾಥ ನಾರಾಯಣ ವಾಸುದೇವ
ಶ್ರೀಕೃಷ್ಣ ಭಕ್ತಪ್ರಿಯ ಚಕ್ರಪಾಣೇ
ಶ್ರೀಪದ್ಮನಾಭಾಚ್ಯುತ ಕೈಟಭಾರೇ
ಶ್ರೀರಾಮ ಪದ್ಮಾಕ್ಷ ಹರೇ ಮುರಾರೇ

ತಾ: ಶ್ರೀನಾಥ, ನಾರಾಯಣ, ವಾಸುದೇವ, ಶ್ರೀಕೃಷ್ಣ, ಭಕ್ತಪ್ರಿಯ, ಚಕ್ರಪಾಣಿ, ಶ್ರೀ ಪದ್ಮನಾಭ, ಅಚ್ಯುತ, ಕೈಟಭಾರಿ, ಶ್ರೀರಾಮ, ಪದ್ಮಾಕ್ಷ, ಹರಿ ಮುರಾರಿ ಮೊದಲಾದ ಹೆಸರುಗಳುಳ್ಳವನೇ, ನಿನಗೆ ವಂದಿಸುವೆನು.

(ಉ) ಮಹಾಗಣೇಶ ಪಂಚರತ್ನ ಸ್ತೋತ್ರಮ್

ಮುದಾಕರಾತ್ತಮೋದಕಂ ಸದಾ ವಿಮುಕ್ತಿಸಾಧಕಂ
ಕಲಾಧರಾವತಂಸಕಂ ವಿಲಾಸಲೋಕರಕ್ಷಕಂ
ಅನಾಯಕೈಕನಾಯಕಂ ವಿನಾಶಿತೇಭದೈತ್ಯಕಂ
ನತಾಶುಭಾಶುನಾಶಕಂ ನಮಾಮಿ ತಂ ವಿನಾಯಕಂ ॥

ತಾ: ಆನಂದದಿಂದ ಮೋದಕವನ್ನು ಕೈಯಲ್ಲಿ ಹಿಡಿದಿದ್ದಾನೆ. ಸ ಮೋಕ್ಷ ಸಾಧಕನಾಗಿದ್ದಾನೆ. ಚಂದ್ರಭೂಷಣನಾಗಿದ್ದಾನೆ. ಅನಾಥನಾಥನಾ ದ್ದಾನೆ. ಗಜಾಸುರನನ್ನು ಕೊಂದಿದ್ದಾನೆ. ನಮಿಸಿದವರ ಅಶುಭ ಪರಿಹಾ- ಮಾಡಬಲ್ಲ ಇಂಥ ವಿನಾಯಕನನ್ನು ನಮಿಸುತ್ತೇನೆ.

ನತೇತರಾತಿಭೀಕರಂ ನವೋದಿತಾರ್ಕಭಾಸ್ವರಂ
ನಮತ್ಸುರಾರಿನಿರ್ಜರಂ ನತಾಧಿಕಾಪದುದ್ಧರಂ
ಸುರೇಶ್ವರಂ ನಿಧೀಶ್ವರಂ ಗಜೇಶ್ವರಂ ಗಣೇಶ್ವರಂ
ಮಹೇಶ್ವರಂ ತಮಾಶ್ರಯೇ ಪರಾತ್ಪರಂ ನಿರಂತರಂ ॥

ತಾ: ನಮಿಸದ ಉದ್ಧತರಿಗೆ ಭಯಂಕರ. ಉದಯಿಸುವ ಸೂರ್ಯನಂ ಹೊಳೆಯುವವ. ದೇವದಾನವರಿಂದ ನಮಸ್ಕೃತ. ನಮಿಸಿದವರ ಮಹ ಆಪತ್ತುಗಳನ್ನು ಪರಿಹರಿಸುವವ. ಸುರೇಶ್ವರ ನಿಧಿಗಳಿಗೊಡೆಯ, ಗಜಾಧಿಪ ಪರಾತ್ಪರ, ಮಹೇಶ್ವರ ಇಂಥ ಮಹಾಗಜವನ್ನು ಮೊರೆ ಹೊಂದುವೆನು.

ಸಮಸ್ತಲೋಕಶಂಕರಂ ನಿರಸ್ತದೈತ್ಯಕುಂಜರಂ
ದರೇತರೋದರಂ ವರಂ ವರೇಭವಕ್ತ್ರಮಕ್ಷರಂ
ಕೃಪಾಕರಂ ಕ್ಷಮಾಕರಂ ಮುದಾಕರಂ ಯಶಸ್ಕರಂ
ಮನಸ್ಕರಂ ನಮಸ್ಕೃತಾಂ ನಮಸ್ಕರೋಮಿ ಭಾಸ್ಕರಂ ॥

ತಾ: ಎಲ್ಲ ಲೋಕಗಳಿಗೆ ಶುಭಕರ, ಮಹಾದೈತ್ಯನಾಶಕ, ಲಂಬೋದ ಗಜಾನನ, ಅವಿನಾಶಿ, ದಯಾಮಯ, ಕ್ಷಮಾಶೀಲ, ಆನಂದಮಯ, ಯಶಸ್ಕ ನಮಿಸಿದವರಿಗೆ ಜ್ಞಾನದಾಯಕ, ಪ್ರಕಾಶಮಾನನಾದ ಈ ಗಣೇಶನಿಗೆ ನಮ ಸ್ಕರಿಸುತ್ತೇನೆ.

ಅಕಿಂಚನಾರ್ತಿಮಾರ್ಜನಂ ಚಿರಂತನೋಕ್ತಿಭಾಜನಂ
ಪುರಾರಿಪೂರ್ವನಂದನಂ ಸುರಾರಿಗರ್ವಚರ್ವಣಂ
ಪ್ರಪಂಚನಾಶಭೀಷಣಂ ಧನಂಜಯಾದಿಭೂಷಣಂ
ಕಪೋಲದಾನವಾರಣಂ ಭಜೇ ಪುರಾಣವಾರಣಂ ||4||

ತಾ: ವಿರಕ್ತರ ಆಪತ್ತುಗಳನ್ನು ಪರಿಹರಿಸುವವ, ವೇದವೇದ್ಯ, ಶಿವನ ಜ್ಯೇಷ್ಠ ಪುತ್ರ, ದೈತ್ಯದರ್ಪವಿನಾಶಕ, ಪ್ರಪಂಚ ನಾಶಕರಿಗೆ ಭಯಂಕರ, ಅರ್ಜುನ ಮುಂತಾದವರಿಗೆ ಪೂಜ್ಯ, ಕಪೋಲದಲ್ಲಿ ಮದಜಲ ಸುರಿಸುತ್ತಿರುವವ, ಇಂಥ ಪುರಾಣ ಗಜವನ್ನು ಭಜಿಸುತ್ತೇನೆ.

ನಿತಾಂತಕಾಂತದಂತಕಾಂತಿಮಂತಕಾಂತಕಾತ್ಮಜಂ
ಅಚಿಂತ್ಯರೂಪಮಂತಹೀನಮಂತರಾಯಕೃಂತನಂ
ಹೃದಂತರೇನಿರಂತರಂ ವಸಂತಮೇವಯೋಗಿನಾಂ
ತಮೇಕದಂತಮೇವತಂ ವಿಚಿಂತಯಾಮಿಸಂತತಂ ||5||

ತಾ: ಅತಿ ಮನೋಹರ ದಂತಕಾಂತಿ ಉಳ್ಳವನೂ ಯಮನಿಗೂ ಯಮನೆನಿಸಿ ಶಿವನ ಪುತ್ರನೂ ಅಚಿಂತ್ಯರೂಪ ಅನಂತನೆನಿಸಿದವನೂ ವಿಘ್ನನಿವಾರಕನೂ ಯೋಗಿಗಳ ಹೃದಯದೊಳಗೆ ಸದಾ ವಾಸಿಸುವವನೂ ಆದ ಆ ಏಕದಂತನನ್ನು ಸದಾ ಧ್ಯಾನಿಸುತ್ತೇನೆ.

ಮಹಾ ಗಣೇಶಪಂಚರತ್ನಮಾದರೇಣಯೋಽನ್ವಹಂ
ಪ್ರಜಲ್ಪತಿಪ್ರಭಾತಕೇ ಹೃದಿಸ್ಮರಂ ಗಣೇಶ್ವರಂ
ಅರೋಗತಾಮದೋಷತಾಂ ಸುಸಾಹಿತೀಂ ಸುಪುತ್ರತಾಂ
ಸಮಾಹಿತಾಯುರಷ್ಟಭೂತಿಮಭ್ಯುಪೈತಿಸೋಽಚಿರಾತ್ ||6||

ತಾ: ಪ್ರಾತಃಕಾಲದಲ್ಲಿ ಗಣೇಶನನ್ನು ಹೃದಯದೊಳಗೆ ಧ್ಯಾನಿಸುತ್ತ ಅವನ ಸ್ತೋತ್ರ ರೂಪವಾದ ಈ ಐದು ರತ್ನಗಳನ್ನು ಪ್ರತಿದಿನ ಭಕ್ತಿಯಿಂದ ಪಠಿಸುವವನು ಆಯುರಾರೋಗ್ಯ ಅಷ್ಟೈಶ್ವರ್ಯ ಕಾವ್ಯರಚನಾ ಸಾಮರ್ಥ್ಯ ಪುತ್ರ ಸಂತತಿಗಳನ್ನು ಬೇಗನೆ ಪಡೆಯುವನು, ದೋಷದೂರನಾಗುವನು.

(ಊ) ಶಿವಪಂಚಾಕ್ಷರ ಸ್ತೋತ್ರಮ್

ನಾಗೇಂದ್ರಹಾರಾಯ ತ್ರಿಲೋಚನಾಯ
ಭಸ್ಮಾಂಗರಾಗಾಯ ಮಹೇಶ್ವರಾಯ
ನಿತ್ಯಾಯ ಶುದ್ಧಾಯ ದಿಗಂಬರಾಯ
ತಸ್ಮೈ ನಕಾರಾಯ ನಮಃ ಶಿವಾಯ

ತಾ : ಶಿವನು ಹಾರದಂತೆ ಸರ್ಪರಾಜನನ್ನು ಧರಿಸಿದ್ದಾನೆ. ಅಂಗರಾಗ ಭಸ್ಮವನ್ನು ಲೇಪಿಸಿಕೊಂಡಿದ್ದಾನೆ. ನಿತ್ಯ ಶುದ್ಧ ದಿಗಂಬರ ತ್ರಿಲೋಚನ ನಕಾರ ಪ್ರತಿಪಾದ್ಯ ಮಹೇಶ್ವರನಾದ ಆ ಶಿವನಿಗೆ ನಮಸ್ಕಾರ.

ಮಂದಾಕಿನೀಸಲಿಲಚಂದನಚರ್ಚಿತಾಯ
ನಂದೀಶ್ವರಪ್ರಮಥನಾಥಮಹೇಶ್ವರಾಯ
ಮಂದಾರಪುಷ್ಪಬಹುಪುಷ್ಪಸುಪೂಜಿತಾಯ
ತಸ್ಮೈ ಮಕಾರಾಯ ನಮಃ ಶಿವಾಯ

ತಾ : ಗಂಗಾಜಲದೊಂದಿಗೆ ಚಂದನವನ್ನು ಲೇಪಿಸಿಕೊಂಡು ಮಂ ಮುಂತಾದ ಹೂಗಳಿಂದ ಅಲಂಕೃತನಾದ ನಂದೀಶ್ವರ ಮುಂತಾದ ಪ್ರಮ ಗೊಡೆಯನೂ ಆದ ಮಕಾರ ಪ್ರತಿಪಾದ್ಯನಾದ ಶಿವನಿಗೆ ನಮಸ್ಕಾರ.

ಶಿವಾಯ ಗೌರೀವದನಾಬ್ಜ ಬೃಂದ
ಸೂರ್ಯಾಯ ದಕ್ಷಾಧ್ವರನಾಶಕಾಯ
ಶ್ರೀ ನೀಲಕಂಠಾಯ ವೃಷಧ್ವಜಾಯ
ತಸ್ಮೈ ಶಿಕಾರಾಯ ನಮಃ ಶಿವಾಯ

ತಾ : ಪಾರ್ವತಿಯ ಮುಖ ಕಮಲವನ್ನರಳಿಸುವ ಸೂರ್ಯ, ದಕ್ಷಯ ವಿಧ್ವಂಸಕ, ನೀಲಕಂಠ, ವೃಷಧ್ವಜ, ಮಂಗಳಕರ, ಶಿಕಾರ ಪ್ರತಿಪಾದ್ಯನಾದ ಶಿವನಿಗೆ ನಮಸ್ಕಾರ.

ವಸಿಷ್ಠ ಕುಂಭೋದ್ಭವಗೌತಮಾರ್ಯ
ಮುನೀಂದ್ರದೇವಾರ್ಚಿತಶಶಿಶೇಖರಾಯ
ಚಂದ್ರಾರ್ಕವೈಶ್ವಾನರಲೋಚನಾಯ
ತಸ್ಮೈ ವಕಾರಾಯ ನಮಃ ಶಿವಾಯ

ತಾ: ವಸಿಷ್ಠ ಅಗಸ್ತ್ಯ ಗೌತಮ ಮುಂತಾದ ಮುನಿಗಳಿಂದಲೂ ದೇವತೆಗಳಿಂದಲೂ ಪೂಜಿತನಾದ, ಚಂದ್ರ ಸೂರ್ಯ ಅಗ್ನಿರೂಪದ ಮೂರು ಕಣ್ಣುಗಳುಳ್ಳ ವಕಾರ ಪ್ರತಿಪಾದ್ಯ ಶಿವನಿಗೆ ನಮಸ್ಕಾರ.

ಯಜ್ಞ ರೂಪಾಯ ಜಟಾಧರಾಯ
ಪಿನಾಕಹಸ್ತಾಯ ಸನಾತನಾಯ
ದಿವ್ಯಾಯ ದೇವಾಯ ದಿಗಂಬರಾಯ
ತಸ್ಮೈ ಯಕಾರಾಯ ನಮಃ ಶಿವಾಯ

ತಾ: ಯಜ್ಞದಲ್ಲಿ ಒಂದು ರೂಪದಿಂದಿರುವ ಜಟಾಧರ, ಪಿನಾಕಹಸ್ತ, ಸನಾತನ, ದಿವ್ಯ, ದಿಗಂಬರ ದೇವನಾದ ಯಕಾರ ಪ್ರತಿಪಾದ್ಯ ಶಿವನಿಗೆ ನಮಸ್ಕಾರ.

---

(೩) ಹರಿಭಕ್ತಿಸಾರ

ಮೂರು ಪದ್ಯಗಳು

ಗಿಳಿಯು ಮರಿಯನು ತಂದು ಪಂಜರ
ದೊಳಗೆ ಪೋಷಿಸಿ ಕಲಿಸಿ ಮೃದು ನುಡಿ
ಗಳನು ಲಾಲಿಸಿ ಕೇಳ್ವ ಪರಿಣತರಂತೆ ನೀನೆನಗೆ
ತಿಳುಹಿ ಮತಿಯನು ಎನ್ನ ಜಿಹ್ವೆಗೆ
ಮೊಳಗುವಂದದಿ ನಿನ್ನ ನಾಮವ
ಬಳಿಯ ಪೊಗಳಿಕೆಯಿತ್ತು ರಕ್ಷಿಸು ನಮ್ಮನನವರತ.

ತಾ: ಜಾಣರು ಗಿಣಿಯು ಮರಿಯನ್ನು ತಂದು ಪಂಜರದೊಳಗಿಟ್ಟು ಪೋಷಿಸಿ ಮುದ್ದು ಮಾತುಗಳನ್ನು ಕಲಿಸುತ್ತಾರೆ. ಆಮೇಲೆ ಗಿಳಿಯು ಆಡುವ ಮುದ್ದು ಮಾತುಗಳನ್ನು ಕೇಳಿ ಆನಂದಿಸುತ್ತಾರೆ. ಹಾಗೆ, ಹೇ ಸ್ವಾಮಿಯೇ, ನನಗೆ ಬುದ್ಧಿಯನ್ನಿತ್ತು ನಿನ್ನ ನಾಮಾವಳಿಯು ನನ್ನ ನಾಲಿಗೆಯಲ್ಲಿ ಸದಾ ಮೊಳಗುವಂತೆ ಮಾಡು. (ನನ್ನ ತೊದಲು ಮಾತನ್ನು ಕೇಳಿ ಸಂತೋಷಿಸು.)

ದೀನ ನಾನು ಸಮಸ್ತ ಲೋಕಕೆ
ದಾನಿ ನೀನು ವಿಚಾರಿಸಲು ಮತಿ
ಹೀನ ನಾನು ಮಹಾಮಹಿಮ ಕೈವಲ್ಯಪತಿ ನೀನು
ಏನ ಬಲ್ಲೆನು ನಾನು ನೆರೆ ಸು
ಜ್ಞಾನಮೂರುತಿ ನೀನು ನಿನ್ನ ಸ
ಮಾನರುಂಟೇ ದೇವ ರಕ್ಷಿಸು ನಮ್ಮನನವರತ.

ತಾ: ನಾನು ಅನಾಥ, ಸಮಸ್ತಲೋಕಗಳಿಗೂ ನೀನು ದಾತ. ನಾನು ಬುದ್ಧಿಗೇಡಿ, ನೀನು ಮಹಾಮಹಿಮನಾದ ಕೈವಲ್ಯಪತಿ, ನನಗೆ ಏನು ತಿಳಿದಿದೆ? ಅಜ್ಞಾನಿ ನಾನು, ನೀನಾದರೋ ಸುಜ್ಞಾನಮೂರ್ತಿ, ದೇವ, ನಿನ್ನ ಸಮಾನರುಂಟೆ?

ಮರೆದೆನಭ್ಯುದಯದಲಿ ನಿಮ್ಮನು
ಮರೆಯನಾಪತ್ತಿನಲಿ ಪೊರೆಯೆಂ
ದೊರಲುವೆನು ಮನವೇಕಭಾವದೊಳಿಲ್ಲ ನಿಮ್ಮಡಿಯ
ಮರೆದು ಬಾಹಿರನಾದವನ ನೀ
ಮರೆವರೇ ಪಸು ತನ್ನ ಕರುವನು
ಮರೆವುದೇ ಮಮತೆಯಲಿ ರಕ್ಷಿಸು ನಮ್ಮನನವರತ.

ತಾ: ಸುಖ ಬಂದಾಗ ನಿನ್ನನ್ನು ಮರೆತೆನು, ಕಷ್ಟ ಬಂದಾಗ ಮರೆಯದೆ 'ಕಾಪಾಡು' ಎಂದು ಒರಲುತ್ತೇನೆ. ನನ್ನ ಮನಸ್ಸು ನಿನ್ನಲ್ಲಿ ಏಕರೂಪವಾಗಿ ನೆಲೆಸಿಲ್ಲ. ನಿನ್ನ ಪಾದವನ್ನು ಮರೆತು ದುರುಳನಾದೆನು. ನಾನು ಮರೆತರೂ ನೀನು ಮರೆಯಬಹುದೇ? ಹಸು ತನ್ನ ಕರುವನ್ನು ಮರೆಯುವುದೇ? ಮಮತೆಯಿಂದ ರಕ್ಷಿಸು ನಮ್ಮನನವರತ.

(೫೦) ಹರಿಕಥಾಮೃತಸಾರ

ಮೂರು ಪದ್ಯಗಳು

ಮಲಗಿ ಪರಮಾದರದಿ ಪಾಡಲು
ಕುಳಿತು ಕೇಳುವ, ಕುಳಿತು ಪಾಡಲು
ನಿಲುವ, ನಿಂತರೆ ನಲಿವ, ನಲಿದರೆ ಒಲಿವೆ ನಿಮಗೆಂಬ
ಸುಲಭನೋ ಹರಿ ತನ್ನವರನರ
ಘಳಿಗೆ ಬಿಟ್ಟಗಲನು ರಮಾಧವ
ನೊಲಿಸಲರಿಯದೆ ಪಾಮರರು ಬಳಲುವರು ಭವದೊಳಗೆ

ತಾ: ಮಲಗಿ ಹಾಡಿದರೆ (ಪರಮಾತ್ಮನು) ಕುಳಿತು ಕೇಳುವನು. ಕುಳಿತು ಕೊಂಡಾಡಿದರೆ ನಿಂತು ಕೇಳುವನು. ಭಕ್ತರು ನಿಂತು ಹಾಡಿದರೆ ನಲಿಯುವನು. ನಲಿದರೆ ಒಲಿಯುವನು. ಆದುದರಿಂದ ಶ್ರೀ ಹರಿಯು ಅತ್ಯಂತ ಸುಲಭನು. ತನ್ನ ಭಕ್ತರನ್ನಗಲಿ ಅರ್ಧ ಘಳಿಗೆ ಕೂಡ ಇರಲಾರನು. ಇಂಥ ಲಕ್ಷ್ಮೀಪತಿಯನ್ನು ಒಲಿಸಲು ಅರಿಯದೆ ಮೂರ್ಖರು ಸಂಸಾರದಲ್ಲಿ ಬಿದ್ದು ಒದ್ದಾಡುವರು.

ಮಕ್ಕಳಾಡಿಸುವಾಗ ಮಡದಿಯೊ
ಳಕ್ಕರದಿ ನಲಿವಾಗ ಹಯಪ
ಲ್ಲಕ್ಕಿಗಜ ಮೊದಲಾದ ವಾಹನಗಳೇರಿ ಮೆರೆವಾಗ
ಬಿಕ್ಕುವಾಗಾಕಳಿಸುತಲಿ ದೇ
ವಕೀತನಯನ ಸ್ಮರಿಸುತಿಹ ನರ
ಸಿಕ್ಕುವನೇ ಯಮದೂತರಗೆ ಆವಲ್ಲಿ ನೋಡಿದರ

ತಾ: ಮಕ್ಕಳನ್ನು ಆಡಿಸುವಾಗ, ಪತ್ನಿಯೊಡನೆ ಪ್ರೇಮದಿಂದ ನಲಿದಾಡುವಾಗ, ಕುದುರೆ, ಪಲ್ಲಕ್ಕಿ, ಆನೆ ಮೊದಲಾದ ವಾಹನಗಳನ್ನೇರಿ ಮೆರೆದಾಡುವಾಗ, ಬಿಕ್ಕುವಾಗ, ಆಕಳಿಸುವಾಗ, ಶ್ರೀಕೃಷ್ಣನನ್ನು ಸ್ಮರಿಸುತ್ತಿರುವವನು ಯಮದೂತರಿಗೆ ಎಲ್ಲಿಯಾದರೂ ಸಿಗುವನೇ? (ಇಲ್ಲ.)

ಅವಕುಲದವನಾದರೇನಿ
ನ್ಯಾವದೇಶದೊಳಿದ್ದರೇನಿ
ನ್ಯಾವಕರ್ಮನ ಮಾಡಲೇನಿನ್ಯಾವಕಾಲದಲಿ
ಶ್ರೀವರನ ಸರ್ವತ್ರದಲಿ ಸಂ
ಭಾವಿಸುತ ಪೂಜಿಸುತ ನೋಡುವ
ಕೋವಿದರಿಗುಂಟೇನೋ ಭವದುಃಖಾದಿ ದೋಷಗಳು

ತಾ : ಯಾವ ಕುಲದವನಾದರೇನು. ಯಾವ ದೇಶದಲ್ಲಿದ್ದರೇನು. ಯಾವು ಕಾಲದಲ್ಲಿ ಯಾವುದೇ ಕರ್ಮ ಮಾಡಿದರೇನು. ಶ್ರೀಹರಿಯನ್ನು ಸರ್ವತ್ರವ್ಯಾಪ್ತ ನೆಂದರಿತು ಅನುಸಂಧಾನಮಾಡಿ ಪೂಜಿಸಿ, ನಲಿದಾಡುತ್ತಿರುವ ಜ್ಞಾನಿಯನ ಸಂಸಾರದ ದುಃಖಗಳು ಮುಟ್ಟುವುವೇ?

---

೫. ನಿತ್ಯಭಜನೆ

ಶ್ರೀನಿವಾಸ

ಶ್ರೀನಿವಾಸ ರಕ್ಷ ಮಾಂ
ವೇಂಕಟೇಶ ಪಾಹಿ ಮಾಂ
ವೇಂಕಟೇಶ ಪಾಹಿ ಮಾಂ
ಶ್ರೀನಿವಾಸ ರಕ್ಷ ಮಾಂ
ಹರೇ ರಾಮ ಹರೇ ರಾಮ
ರಾಮ ರಾಮ ಹರೇ ಹರೇ
ಹರೇ ಕೃಷ್ಣ ಹರೇ ಕೃಷ್ಣ
ಕೃಷ್ಣ ಕೃಷ್ಣ ಹರೇ ಹರೇ
ನಿನ್ನ ನಂಬಿದೆ ಶ್ರೀನಿವಾಸ
ಎನ್ನ ರಕ್ಷಿಸು ಸ್ವಾಮಿ ಶೇಷಗಿರಿವಾಸ

ನಾರಾಯಣ

ನಾರಾಯಣ ಹರಿ ನಾರಾಯಣ ಹರಿ ನಾರಾಯಣ ಹರಿ ನಾರಾಯಣ
ನಾರಾಯಣ ಜಯ ನಾರಾಯಣ ಜಯ ನಾರಾಯಣ ಜಯ ನಾರಾಯಣ

ರಾಮ

ರಘುಪತಿ ರಾಘವ ರಾಜಾರಾಮ
ಪತಿತಪಾವನ ಸೀತಾರಾಮ
ಭಕ್ತಪೋಷಕ ರಾಜಾರಾಮ
ಮುಕ್ತಿಪ್ರದಾಯಕ ಸೀತಾರಾಮ

ಕೃಷ್ಣ

ರಾಧಾಕೃಷ್ಣ ಜಯ ಕುಂಜವಿಹಾರಿ
ಮುರಲೀಧರ ಗೋವರ್ಧನಧಾರಿ
ಶಂಖಚಕ್ರ ಪೀತಾಂಬರಧಾರಿ
ಪಂಕಜನಾಭ ಮುಕುಂದ ಮುರಾರಿ

ವಿಠ್ಠಲ

ಜಯ ಜಯ ವಿಠ್ಠಲ ಪಾಂಡುರಂಗ
ಜಯ ಹರಿ ವಿಠ್ಠಲ ಪಾಂಡುರಂಗ
ತಂದೆ ತಾಯಿಯು ಪಾಂಡುರಂಗ
ಬಂಧು ಬಳಗವು ಪಾಂಡುರಂಗ

ದುರ್ಗಾ

ಜಯದುರ್ಗೇ ಜಯದುರ್ಗೇ ಮಹಿಷಮರ್ದಿನಿ ಜಯದುರ್ಗೇ
ಮಂಗಲದಾಯಿನಿ ಜಯದುರ್ಗೇ ಜಗಜ್ಜನನಿ ಜಯ ಜಯದುರ್ಗೇ

ಹನುಮಾನ್

ಜಯ ಹನುಮಾನ್ ಪವಮಾನಸುತ
ಜಯ ಮಂಗಲ ಪವಮಾನಸುತ
ಕಾಮಿತವಿತರಣ ವಾಯುಸುತ
ರಾಮದೂತ ಪವಮಾನಸುತ

ಶಂಕರ

ಶಂಭೋ ಶಂಕರ ಉಮಾಮಹೇಶ್ವರ ಸಾಂಬಸದಾಶಿವ ಪಾಲಯ ಮಾಂ
ಜಯ ಜಯ ಶಂಕರ ಶಶಾಂಕ ಶೇಖರ ಹೇ ಶಿವ ಶಂಕರ ಪಾಲಯ ಮಾಂ

ಸುಬ್ರಹ್ಮಣ್ಯ

ಸುಬ್ರಹ್ಮಣ್ಯಂ ಸುಬ್ರಹ್ಮಣ್ಯಂ ಷಣ್ಮುಖನಾಥಂ ಸುಬ್ರಹ್ಮಣ್ಯಂ
ಭಜ ಶರವಣಭವ ಸುಬ್ರಹ್ಮಣ್ಯಂ ಭಜ ಭವಭಯಹರ ಸುಬ್ರಹ್ಮಣ್ಯಂ

ಗಣಪತಿ

ಗಜಾನನ ಗಜಾನನ ಪಾಹಿ ಪಾಹಿ ಜಯ ಗಜಾನನ
ಲಂಬೋದರ ಜಯ ಗಜಾನನ ವಿಘ್ನವಿನಾಶಕ ಗಜಾನನ

ಈ ಪದ್ಯಗಳನ್ನು ಆವಾವ ದೇವಾಲಯಂಗಳಿಗೆ ಹೋಗುವಾಗಲೂ ಹೇಳಬಹುದು. ಇದರ ಜೊತೆಗೆ ಅವರವರಿಗೆ ತಿಳಿದಂತೆ ಎಷ್ಟೂ ದೇವರ ಪದ್ಯಗಳನ್ನೂ ಸೇರಿಸಿಕೊಳ್ಳಬಹುದು. ಕಡಿಮ್ಮೆಯೆಂದರೆ ಇಷ್ಟನ್ನಾದರೂ ಮಾಡುತ್ತ ಬರಬೇಕು.

---

೬. ಕೀರ್ತನೆಗಳು

ಶ್ರೀ ವೆಂಕಟರಮಣ

(ರಾಗ—ಧನ್ಯಾಸಿ—ಛಾಪುತಾಳ)

ಸಾರಿದೆ ನಿನ್ನ ವೆಂಕಟ ರನ್ನ ಕಾಯಬೇಕೆನ್ನ
ನೀರಜನಾಭನೆ ನಿರ್ಮಲ ಚಿತ್ತ ಗುಣಸದನ ॥ಪಲ್ಲ॥

ಅನಾಥನು ನಾನು ದೀನರಕ್ಷಕ ನೀನು
ನಿನ್ನವನೆಂದು ನೋಡು ನೀನಾಗಿ ದಯಮಾಡು ॥1॥

ಎನ್ನ ಕುಂದುಗಳನ್ನು ಎಣಿಸಲಾಗದು ದೇವ
ಪನ್ನಗಶಯನನೆ ಪರಮ ಪುರುಷ ಹರಿಯೆ ॥2॥

ದೇಶದೇಶದವರ ಪೊರೆವಂತೆಪೊರೆಯೆನ್ನ
ಶೇಷಪರ್ವತವಾಸ ಶ್ರೀಶ ಹಯವದನ ॥3॥

(ರಾಗ– ಮಧ್ಯಮಾವತಿ - ಅಟ್ಟತಾಳ)

ಬಂದು ನಿಂತಿಹ ನೋಡಿ ಭೂತಳದಿ ವೇಂಕಟ ಇಂದಿರೆಯ ಒಡಗೂಡಿ ಒಪ್ಪುವ ನಿರಂತರ
ಪೊಂದಿ ಭಜನೆಯ ಮಾಡಿ ಆನಂದಗೂಡಿ ॥ಪ॥

ವಂದಿಸುತ ಮನದೊಳಗೆ ಇವನಡಿ ದ್ವಂದ್ವ ಭಜಿಸಲು ಬಂದ ಭಯಹರ ಇಂದುಧರ
ಸುರ ವೃಂದನುತ ಗೋವಿಂದ ಘನದಯಾಸಿಂಧು ಶ್ರೀಹರಿ ॥ಅ॥

ದ್ವಾರದೆಡ ಬಲದಲಿ ಜಯ ವಿಜಯರಿಬ್ಬರು ಸೇರಿ ಸೇವಿಪರಲ್ಲಿ ಸನಕಾದಿನುತ
ಶೃಂಗಾರ ನಿಧಿ ಅಂಗಳದಲಿ ಮುಕ್ತಿನಲಿ ಶೋಭಿಪಹಾರ ಪೊಂದಿಹಂದಲ್ಲಿ ವಿಸ್ತಾರದಲಿ ॥1॥

ವಾರ ವಾರಕೆ ಪೂಜೆಗೊಂಬುವ ಹಾರ ಮುಕುಟಾಭರಣ ಕುಂಡಲ ಧಾರ ಭುಜ ಕೇಯೂರ
ಭೂಷಿತ ಮಾರಪಿತ ಮೋಹನಾಂಗ ಚಾರು ಪೀತಾಂಬರ ಕಟಿಕರ ವೀರಕಲ್ಹಾರಾಗಿ
ಹೂವಿನ ಹಾರ ಕೊರಳೊಳು ಎಸೆಯುತಿರೆ ವದನಾರವಿಂದನು ನಗುತ ನಲಿಯುತ ॥2॥

ಎಲ್ಲ ಭಕುತರಭೀಷ್ಟ ಕೊಡುವುದಕೆ ತಾಕೈವಲ್ಯ ಸ್ಥಾನವ ಬಿಟ್ಟು ಶೇಷಾದ್ರಿ ಮಂದಿರದಲ್ಲಿ
ಲೋಲುಪದಿಟ್ಟ ಸೌಭಾಗ್ಯನಿಧಿ ರಿಲ್ಲ ಭುಜಬಲ ಪುಷ್ಪ ಕಸ್ತೂರಿ ಇಟ್ಟ
ಚೆಲ್ವ ಫಣೆಯಲಿ ಶೋಭಿಸುವ ಸಿರಿ ವಲ್ಲಭನ ಗುಣ ಪೊಗಳದಿಹ ಜನ ಖುಲ್ಲರೆದ
ನಲ್ಲಣ ಪರಾಕ್ರಮ ಮಲ್ಲ ಮರ್ದನ ಮಾತುಳಾರಿ ಫಲ್ಗುಣನ ಸುಖ ಪ್ರಕಟನಾಗಿ
ದುರ್ಲಭವನು ಅಘದೂರ ಬಹು ಗಲ್ಯ ಹೃದಯನು ಸೃಷ್ಟಿಗೆ ಉಲ್ಲಾಸ ಕೊಡುತಹಲಿ
ಚಂದದಲಿ ॥3॥

ಪದಕ ಕೌಸ್ತುಭ ಹಾರ ಸರಿಗೆಯು ಕಂದರ ಸುದರ ಶನದರ ಸುಂದರ ಮನೋಹರ
ಪದಯುಗದ ನೂಪುರ ಇಟ್ಟಿಹನು ಸುಸ್ಮನಿ
ವಿಧಿಪ ಪಾದ್ಮರ ಪೊರೆವದಾತನು ತುದಿಮೊದಲು ಮಧ್ಯಮ ವಿರಹಿತನು
ಉದುಭವಾದಿಗಳೀವ
ಕರ್ತನು ತ್ರಿದಶ ಪೂಜಿತ ತ್ರಿಭುವನೇಶ ಸುವಿಲಾಸದಿ ಸ್ವಾಮಿ
ತೀರ್ಥದಿ ಉದಿಸುತಿರೆ ಸಿರಿ
ಮಹಿಳೆ ಸಹಿತದಿ ಪದುಮನಾಭ ಪುರಂದರ ವಿಠ್ಠಲ ಪ್ರತಿ ವರುಷ
ಬ್ರಹ್ಮೋತ್ಸವದಿ ಮೆರೆಯುತ ॥4॥

ಹಿಂದೂವಿನ ಅಂತರಂಗಕ್ಕೆ

(1) ಹಿಂದೂ ಧರ್ಮವು ಅತ್ಯಂತ ಶ್ರೇಷ್ಠ ಧರ್ಮವಾಗಿದೆ.

(2) ಹಿಂದೂಗಳೆಲ್ಲರೂ ಉಚ್ಚ, ನೀಚ ಭಾವನೆಗಳನ್ನು ತೊರೆದು ಸೋದರರಂತೆ ನಡೆದು ಕೊಳ್ಳುವುದು.

(3) ಸಕಲ ಜೀವಾತ್ಮರುಗಳು ಪರಮಾತ್ಮನ ಮಕ್ಕಳಾಗಿದ್ದಾರೆ. ಆದುದರಿಂದ ಜನರ ಆದರಲ್ಲಿಯೂ ದೀನ ದಲಿತರ ಮತ್ತು ರೋಗಿಗಳ ಸೇವೆಯೇ ಪರಮಾತ್ಮನ ಸೇವೆ ಎನಿಸುವುದು.

(4) ಸೇವಾ ಕಾರ್ಯಗಳು ದಿನಚರಿಯ ಒಂದು ಅಂಶವಾಗಿರಲಿ.

ದೇವಾಲಯಗಳನ್ನು ಜೀವನದ ಮೇಲೆ ಉತ್ತಮ ಪರಿಣಾಮವನ್ನುಂಟು ಮಾಡಲು ನಿರ್ಮಿಸಲಾಗಿದೆ. ಅವುಗಳ ವಹಿವಾಟನ್ನು ಸುವ್ಯವಸ್ಥಿತವಾಗಿ ಉತ್ತಮ ರೀತಿಯಲ್ಲಿ ನಿರ್ವಹಿಸುವುದು.

ಪ್ರತಿಯೊಬ್ಬ ಹಿಂದೂವು ದಿನವೂ ಬೆಳಿಗ್ಗೆ ಮತ್ತು ಸಂಜೆ ದೇವರ ಪ್ರಾರ್ಥನೆಯನ್ನು ನಡೆಸಿ ಭಗವಂತನಿಗೆ ತನ್ನ ಕೃತಜ್ಞತೆಯನ್ನು ಸಮರ್ಪಿಸುವುದು. ಸಮೀಪದಲ್ಲಿರುವ ದೇವಾಲಯವನ್ನು ತಪ್ಪದೆ ನಿತ್ಯವೂ ಸಂದರ್ಶಿಸಿ ಭಕ್ತಿಪೂರ್ವಕ ನಮಸ್ಕಾರಗಳನ್ನು ಅರ್ಪಿಸುವುದು.

(5) ಎಳೆಯರಿಗೆ ಸ್ತೋತ್ರಗಳು ಮತ್ತು ನೀತಿ ಪಾಠಗಳನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಿಸುವುದು.

(6) ಹಿಂದೂ ಸೋದರರು ಮತಾಂತರಿತರಾಗದಂತೆ ಎಚ್ಚರ ವಹಿಸುವುದು.

ಹಿಂದೂ ಧರ್ಮ ರಕ್ಷಣ ಸಂಸ್ಥೆ,
ತಿರುಪತಿ

"ಶುಭಂ"

ಕಲ್ಯಾಣಾದ್ಭುತಗಾತ್ರಾಯ
ಕಾಮಿತಾರ್ಥಪ್ರದಾಯಿನೇ ।
ಶ್ರೀಮದ್ವೇಂಕಟನಾಥಾಯ
ಶ್ರೀನಿವಾಸಾಯ ಮಂಗಳಮ್ ॥

ಬೆಲೆ: ೧೫ ಪೈಸೆ

ಬೆಂಗಳೂರು ವಿಭಾಗ ಕಾರ್ಯಾಲಯ :

ತಿರುಮಲ–ತಿರುಪತಿ ದೇವಸ್ಥಾನಗಳ ಹಿಂದೂ ಧರ್ಮ ರಕ್ಷಣಾ ಸಂಸ್ಥೆ,
ಗಾಯತ್ರೀ ದೇವಿಪಾರ್ಕ್ ಬಡಾವಣೆ, ಬೆಂಗಳೂರು–560003.

Second Print : 10,000 copies Published by Sri P.V.R.K. PRASAD I.A.S. Executive Officer and Administrative Member, Tirumala Tirupathi Devastanams Hindu Dharma Rakshana Samstha, Tirupathi

ಬೃಂದಾವನ್ ಪ್ರಿಂಟರ್ಸ್ (ಪ್ರೈ) ಲಿಮಿಟೆಡ್, ಬೆಂಗಳೂರು–560 004